Mr. SPEAKER.—The question is :

" That the Mysore Appropriation Bill, 1967, be passed. "

The motion was adopted.

MYSORE APPROPRIATION (VOTE ON ACCOUNT) BILL, 1967.

Motion to Consider.

Sri RAMAKRISHNA HEGDE.—Sir, I beg to move :

" That the Mysore Appropriation (Vote on Account) Bill, 1967, be taken into consideration. "

Mr. SPEAKER.—Motion moved :

" That the Mysore Appropriation (Vote on Account) Bill, 1967, be taken into consideration."

ಶ್ರೀ ಸದಾಶಿವಪ್ಪ ಪಾಟೀಲ (ದೇವದುರ್ಗ).—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಅರ್ಥಸಚಿವರು ತಮ್ಮ ಭಾಷಣದಲ್ಲಿ, ನಮ್ಮ ರಾಜ್ಯದ ವತಿಯಿಂದ ಕ್ಯಾಬಿನೆಟ್ ದರ್ಜೆಯ ಇಬ್ಬರು ಮಂತ್ರಿಗಳನ್ನು ತೆಗೆದುಕೊಂಡಿರುವುದಕ್ಕೆ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ. ನಾನೂ ಸಹ ಅದಕ್ಕೆ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಆದರೆ ಸುದ್ದಿಯಿಂದಲೋ ಅಥವಾ ದುರ್ದೈವದಿಂದಲೋ ರಾಯಚೂರು ಜಿಲ್ಲೆಯಿಂದ ಕಳೆದ 20 ವರ್ಷಗಳಿಂದ ಯಾರನ್ನೂ ಸಚಿವ ಸ್ಥಾನಕ್ಕೆ ತೆಗೆದುಕೊಂಡಿಲ್ಲ.

ಅಧ್ಯಕ್ಷರು.—ಕೇಂದ್ರದಲ್ಲೋ ಅಥವಾ ನಮ್ಮ ರಾಜ್ಯದಲ್ಲೋ ?

ಶ್ರೀ ಸದಾಶಿವಪ್ಪ ಪಾಟೀಲ.—ನಮ್ಮ ರಾಜ್ಯದಲ್ಲಿ. ನಮ್ಮ ರಾಯಚೂರ ಜಿಲ್ಲೆಗೆ ಪ್ರಾತಿನಿಧ್ಯವನ್ನು ಕೇಳುತ್ತಿರುವುದು ಏತಕ್ಕೆಂದರೆ, ಈಗಿರುವ ಎಲ್ಲಾ ಮಂತ್ರಿವರ್ಗದವರು ತಮ್ಮ ಜಿಲ್ಲೆಯ ಅಥವಾ ತಾವು ಅರಿಸಿಬಂದಿರುವ ಕ್ಷೇತ್ರದ ಅಭಿವೃದ್ಧಿಗಾಗಿ ಹೆಚ್ಚಿನ ಪ್ರಾತಿನಿಧ್ಯವನ್ನು ಕೊಡುತ್ತಾ ಬಂದಿದ್ದಾರೆ. ಅದರ ಸಲುವಾಗಿ ನಮ್ಮ ಜಿಲ್ಲೆಗೂ ಪ್ರಾತಿನಿಧ್ಯವನ್ನು ಕೊಡಬೇಕೆಂದು ಕೇಳುತ್ತಿದ್ದೇನೆ. ಇನ್ನು ಮೇಲೆ ಮಂತ್ರಿಮಂಡಲವನ್ನು ಹೆಚ್ಚಿಸಬಾರದೆಂದು ನಮ್ಮ ಮಿತ್ರರು ಹೇಳಿದರು. ಈಗಿರುವ ಮಂತ್ರಿಮಂಡಲದಲ್ಲಿ ಕೆಲವರು ಕಳೆದ 20 ವರ್ಷಗಳಿಂದ ಮಂತ್ರಿಗಳಾಗಿದ್ದಾರೆ. ಅಂತಹ ವರನ್ನು ತೆಗೆದು ನಮ್ಮ ಜಿಲ್ಲೆಯವರಿಗೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.—ವಿಷಯದ ಮೇಲೆ ಮಾತನಾಡಿ.

ಶ್ರೀ ಸದಾಶಿವಪ್ಪ ಪಾಟೀಲ್.—ಈ ಪ್ರಜಾಪ್ರಭುತ್ವದಲ್ಲಿ ವತನದಾರಿ ಪದ್ಧತಿಯನ್ನು ರದ್ದು ಮಾಡಬೇಕೆಂದು ನಾವು ನಿರ್ಣಯ ಮಾಡಿದ್ದೇವೆ. ಆದರಂತೆ ಈ ಮಂತ್ರಿಗಳಲ್ಲೂ ಸಹ ವತನದಾರಿ ಪದ್ಧತಿ ಹೋಗಬೇಕು. ನನಗೆ ತಿಳಿದಿರುವಂತೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಾ ಶಿಕ್ಷಣ ವಿಚಾರದಲ್ಲಿ ಬಹಳ ಹಿಂದುಳಿದಿದೆ. ಅಲ್ಲಿ ಶೇಕಡ 8ರಷ್ಟು ಗಂಡಸರು ವಿದ್ಯಾವಂತರಾಗಿದ್ದಾರೆ. ಶೇಕಡ 2 ರಷ್ಟು ಹೆಂಗಸರು ವಿದ್ಯಾವಂತರಿದ್ದಾರೆ. ಈಗ ನಮ್ಮ ತಾಲ್ಲೂಕಿನಲ್ಲಿ ಕೇವಲ ಒಂದು ಸರ್ಕಾರಿ ಹೈಸ್ಕೂಲ್ ಇದೆ. ವಿದ್ಯಾ ಇಲಾಖೆಯವರು ಮತ್ತು ಸಂಬಂಧಪಟ್ಟ ಸಚಿವರು ನಮ್ಮ ತಾಲ್ಲೂಕಿಗೆ ಹೆಚ್ಚಿನ ಹೈಸ್ಕೂಲ್‌ಗಳನ್ನು ಕೊಡಬೇಕು. ಇನ್ನೊಂದು ವಿಷಯವೆಂದರೆ, ನಮ್ಮ ರಾಯಚೂರು ಜಿಲ್ಲೆಯಲ್ಲಿ ಒಂದು ಪಾಲಿಟೆಕ್ನಿಕ್ ಇನ್‌ಸ್ಟಿಟ್ಯೂಟ್ ಮತ್ತು ಎರಡು ಖಾಸಗಿ ಕಾಲೇಜು ಎರ್. ವಿ. ಡಿ. ಕಾಲೇಜು ರಾಯಚೂರು ಮತ್ತು ಗವಿಸಿದ್ದೇಶ್ವರ ಕಾಲೇಜು ಕೊಪ್ಪಳ ತಾಲ್ಲೂಕಿನಲ್ಲಿ ಇವೆ. ಇಲ್ಲದ್ದ ಇನ್ನೊಂದು ಕಾಲೇಜನ್ನು ಬೇರೆ ಕಡೆಗೆ ವರ್ಗಾಯಿಸಿದ್ದಾರೆ. ಗುಲ್ಬರ್ಗಾದಲ್ಲಿ ಹೈದರಾಬಾದ ಎಜ್ಯುಕೇಶನ್ ಸೊಸೈಟಿಯಿಂದ ಎರಡು ಜೆಕ್ನಿಕರ್ ಕಾಲೇಜು ನಡೆಯುತ್ತಿವೆ. ಆದರಲ್ಲಿ ಯಾವ ತರಹದ ಶಿಕ್ಷಣ ನಡೆಯುತ್ತಿದೆ ಎಂಬುದು ಹೈದರಾಬಾದ್ ಕರ್ನಾಟಕದಿಂದ ಬಂದಿರುವ ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ. ಈ ಕಾಲೇಜುಗಳು ಮೈಸೂರು ರಾಜ್ಯದ ವಿದ್ಯಾರ್ಥಿಗಳ ಸಲುವಾಗಿ ಇದಯೇ ಅಥವಾ ಹೈದರಾಬಾದ್ ಕರ್ನಾಟಕದವರಿಗೆ ಇದೆಯೇ ಎಂಬುದು ಗೊತ್ತಾಗುವು

ದಿಲ್ಲ. ಏಕೆಂದರೆ ಈ ಕಾಲೇಜುಗಳಲ್ಲಿ 100ಕ್ಕೆ 90ರಷ್ಟು ಹುಡುಗರು ಬೇರೆ ರಾಜ್ಯದಿಂದ ಬಂದಿರುವವರಾಗಿದ್ದಾರೆ. ನಮ್ಮ ರಾಜ್ಯದವರು ಕೇವಲ 100ಕ್ಕೆ 10ರಷ್ಟು ಇದ್ದಾರೆ. 3000 ರೂಪಾಯಿಗಳಿಂದ 5000 ರೂಪಾಯಿಗಳವರೆಗೆ ಡೊನೇಷನ್ ತೆಗೆದುಕೊಂಡು ಪ್ರವೇಶ ಕೊಡಬೇಕೆಂದು ಈ ಕಾಲೇಜಿನವರು ನಿರ್ಣಯಿಸಿದ್ದಾರೆ. ಕೆಲವುಕಡೆ 15 ರಿಂದ 20 ಸಾವಿರದವರೆಗೆ ಡೊನೇಷನ್ ತೆಗೆದುಕೊಂಡು ಬೇರೆ ರಾಜ್ಯದವರಿಗೆ ಪ್ರವೇಶ ಕೊಡುತ್ತಿದ್ದಾರೆ. ಇಂತಹ ಶಿಕ್ಷಣದಿಂದ ನಮ್ಮ ರಾಷ್ಟ್ರಕ್ಕಾಗಲಿ ನಮ್ಮ ರಾಜ್ಯಕ್ಕಾಗಲಿ ಯಾವ ರೀತಿ ಸುಧಾರಣೆಯಾಗುತ್ತದೆ ಎಂದು ಕೇಳಿಯಿಸುತ್ತೇನೆ. 15-20 ಸಾವಿರ ರೂಪಾಯಿಗಳನ್ನು ಡೊನೇಷನ್ ರೂಪದಲ್ಲಿ ಕೊಟ್ಟು ಪ್ರವೇಶ ಮಾಡಿದ ವಿದ್ಯಾರ್ಥಿಗಳು ಮುಂದೆ ಟೆಕ್ನಿಕಲ್ ಗ್ರಾಜುಯೆಟ್ ಆಗಿ, ಸರ್ಕಾರದ ಕೆಲಸಕ್ಕೆ ಬಂದ ಮೇಲೆ ಯಾವ ರೀತಿಯಿಂದ ಸರ್ಕಾರಕ್ಕೆ ಸೇವೆ ಸಲ್ಲಿಸಬಹುದು ಎಂಬುದನ್ನು ತಮ್ಮೆಲ್ಲರ ಗಮನಕ್ಕೆ ತರಬಯಸುತ್ತೇನೆ. ಒಟ್ಟಿನಲ್ಲಿ ಹೈಸ್ಕೂಲು ಶಿಕ್ಷಣದವರೆಗೆ ಫ್ರೀ ಎಜ್ಯುಕೇಷನ್ ಮಾಡಿದರೆ ಒಳ್ಳೆಯದಾಗುತ್ತದೆ. ಸರ್ಕಾರಿ ಕಾಲೇಜುಗಳಲ್ಲಿ ಬಡ ವಿದ್ಯಾರ್ಥಿಗಳಿಗೆ ಸ್ಥಾನ ಸಿಕ್ಕುವಂತಾದರೆ ಒಳ್ಳೇ ಶಿಕ್ಷಣ ದೊರೆತು ರಾಷ್ಟ್ರದ ಅಭ್ಯುದಯವಾಗುತ್ತದೆ. ಇದಲ್ಲದೆ ಖಾಸಗಿ ಕಾಲೇಜುಗಳನ್ನು ತೆಗೆದುಹಾಕಿ ಅಂಥಹ ಕಾಲೇಜುಗಳನ್ನು ಸರ್ಕಾರದವರು ತಮ್ಮ ಕೈಯಲ್ಲಿ ತೆಗೆದುಕೊಳ್ಳಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ಕೇಂದ್ರ ಸರಕಾರದಲ್ಲಿ ವಿದ್ಯಾಮಂತ್ರಿಗಳಾದ ಶ್ರೀ ಛಾಗ್ಲಾ ಅವರು ಒಂದು ಮಾತು ಹೇಳಿದ್ದೇನೆಂದರೆ ಎಜ್ಯುಕೇಷನ್ ಸಿನ್ಸ್ ಕಮಿಷ್ಯನರೈಜ್ಡ್ ಎಜ್ಯುಕೇಷನ್ ಆಗಬಾರದೆಂದು. ಈಗ ಇರತಕ್ಕದ್ದೂ ಬರೀ ಶ್ರೀಮಂತರಿಗಾಗಿಯೇ ಇರತಕ್ಕ ಎಜ್ಯುಕೇಷನ್ ಆಗಿದೆ. ಬಡವರಿಗೆ ಎಜ್ಯುಕೇಷನ್ ದೊರೆಯುತ್ತಿಲ್ಲ. ಈ ರೀತಿ ಆಗಬಾರದು.

ಇನ್ನು ಒಕ್ಕಲತನದ ದೃಷ್ಟಿಯಿಂದ ಹೇಳುವುದಾದರೆ ಹೈದರಾಬಾದ ಕರ್ನಾಟಕದ ಸದಸ್ಯರು ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಒತ್ತಿ ಹೇಳಿದ್ದಾರೆ. ಅದನ್ನು ನಾನೂ ಸಹ ಸಂಪೂರ್ಣವಾಗಿ ಅನುಮೋದನೆ ಮಾಡುತ್ತೇನೆ. ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ನೀರಾವರಿ ಮಾಡಿ ಹೆಚ್ಚು ಆಹಾರ ಬೆಳೆಸಬಹುದು ಮತ್ತು ಆಹಾರ ಸಮಸ್ಯೆಯನ್ನು ನೀಗಿಸಬಹುದು. ಇಷ್ಟೇ ಅಲ್ಲದೆ ಬೇರೆ ರಾಜ್ಯಗಳಿಗೂ ಸಹ ಆಹಾರ ಧಾನ್ಯ ಒದಗಿಸಬಹುದು, ನಮ್ಮ ರಾಯಚೂರು ಜಿಲ್ಲೆಯಲ್ಲಿ ಲಫ್ಟ್ ಇರಿಗೇಶನ್ ಸಿನ್ಸಂ ಬಗ್ಗೆ ಸರ್ವೇ ಮಾಡಲಾಗಿದೆ. ಇದನ್ನು ತೀವ್ರ ಕಾರ್ಯಗತ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಟ್ಯಾಂಕ್ ಬೆಡ್ ವಿಚಾರ ಒಂದು ಮಾತು ಹೇಳಬೇಕಾಗಿದೆ. ಟ್ಯಾಂಕ್ ರಿಪೇರಿ ಬಗ್ಗೆ ಸಾವಿರಾರು ರೂಪಾಯಿ ಖರ್ಚು ಮಾಡಿದರೂ ಕೂಡ ಆದರ ವಾಲೀಕರ ಅಧಿಕಾರ ಹಾಗೇ ಉಳಿದಿದೆ. ಆದುದರಿಂದ ಟ್ಯಾಂಕ್ ಬೆಡ್ ವಾಲೀಕರಿಗೆ ಶೀಘ್ರವಾಗಿ ಪರಿಹಾರ ಕೊಟ್ಟು ಅವರ ಅಧಿಕಾರ ತೆಗೆದು ಹಾಕಬೇಕು. ಯಾಕೆಂದರೆ ಅಂಥ ವಾಲೀಕರಿಗೆ ಸ್ವಲ್ಪ ಇಂಟರೆಸ್ಟ್ ಇರುವುದರಿಂದ ತೊಂದರೆ ಕೊಡುತ್ತಾರೆ; ಮತ್ತು ನೀರು ಹಾಳುಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದರಿಂದ ರೈತರಿಗೆ ನೀರು ದೊರೆಯುವುದಿಲ್ಲ ಎಂದು ಹೇಳಬಯಸುತ್ತೇನೆ ಇದನ್ನು ಸರಿಪಡಿಸಬೇಕೆಂದು ಕೇಳಿಕೊಂಡು ನನ್ನ ಮಾತು ಮುಗಿಸುತ್ತೇನೆ.

†SRI. N. G. HALAPPA (Channagiri).—Sir, I am one of those members who have entered the House for the first time. Hence we pray if we go astray the leader may kindly bear with us and guide us

Sir, I have listened with rapt attention to the speeches of the Hon'ble members on both sides of the House. The treasury benches have put forward the Demands and Appropriation Bill. But, my contention is whether the amount granted would be put to purposeful use and maximum benefit would be derived. In this connection I should like to bring a few facts for the consideration of this House. So far as the P. W. D. is concerned, I shall bring one instance to your notice. Even though a particular gentleman has brought to the notice of the Minister for Public Works, Chief Minister and the Chief Engineer, an instance of irregular payment, no action is taken. A contractor from Thopanahalli, Channagiri Taluk, it would appear, has made use of the stones from his land and the Engineer has given him the lead charges, though the stones had to be brought from a quarry situated 5 miles away. Actually the name of the gentleman is Sri Channabasappa.

Mr. SPEAKER.—Please do not mention names.

Sri N. G. HALAPPA.—His land is hardly two furlongs from the workspot and stones have been brought from there and used for channe purpose. This way serveral thousands of rupees have been irregularly spent. I have come to know about this because he happens to be a client of mine. I know him personally also.

Mr. SPEAKER.—Please do not mention it on the floor of this House. It does not bring credit to you either.

Sri N. G. HALAPPA.—In spite of the fact that this was brought to the notice of the Cheif Minister and to the concerned Minister, no action has been taken. Lead charges had to be given if only he had carried the stones from a quarry which is 5 miles away from the workspot. But the stones have been removed from his land which is a few furlongs from the workspot. During the election tour I happened to go to the place and I have personally verified the fact.

Mr. SPEAKER.—I would advise the hon. member to kindly pass on to the next point.

Sri N. G. HALAPPA.—One more point I wish to bring to your notice is, in Basavapatna Hobli which is irrigated by Tungabhadra Project, some of the gomals have been irrigated. Especially in Kattaall gere village gomals have been irrigated and poor people have cultivated the land. No doubt it is unauthorised but those lands could have been disposed off under darkhast. The ex-M.L.A. of this constituency and his relatives have removed all and have cultivated these lands. Even though it has been brought to the notice of the Divisional Commissioner and the Revenue Minister, no action has been taken in this matter to evict these unauthorised cultivators who have nearly 50 to 60 acres of land for a period of over two years. I do not know whether T.T. is levied.

Sri B. RACHAIAH.—For the first time he is mentioning. He has not brought to the notice of the Government.

Sri N. G. HALAPPA.—Petitions have been sent to the Chief Minister and Revenue Minister.

Mr. SPEAKER.—The procedure here is, not to make allegations against persons who are not present here. If the Member wants to make allegations then he must give notice of that to the Minister. If he suddenly springs up a surprise he cannot either deny or admit.

Sri N. G. HALAPPA.—Petitions have been submitted by the people.

Mr. SPEAKER.—This is not a court where pleadings are filed. Here it is debate with regard to the budget and Appropriation Bill.

Sri N. G. HALAPPA.—I want to bring to the notice of this House, that in respect of all these things there have been transgressions of law. The law must take its course, whoever may be the person concerned. In doing this, the Government have failed.

So far as administration of law and order is concerned, yesterday my friends were quoting that the crimes have been on the increase. I should like to say that the Government Pleaders and prosecutors are chosen from amongst the members who belong to the ruling party and they are mostly preferred and in a way there has been miscarriage of justice. Favourtism is shown to people who belong to the ruling party. I may bring to the notice of this House two cases which have been disposed of and where there has been miscarriage of justice.

Mr. SPEAKER.—The member may please not make mistakes in the very first speech.

Sri N. G. HALAPPA.—So far as courts in Shimoga are concerned, I wish to say that in most of the courts there are not enough furniture. Though it is a headquarter most of the courts are not well furnished. In some courts there are chairs with three legs, no table cloth.

Mr. SPEAKER.—These are small matters. He can write to the Minister concerned.

Sri N. G. HALAPPA.—So far as prohibition policy is concerned, it must be either scrapped or pursued vigourously. Otherwise there is no way out. So far as the Health Department is concerned, in my taluk there are two villages, Kerebilichi and Tavarekere, where hospitals have been sanctioned. In Tavarekere no building has come up It is a hobli consisting of 50,000 population. Though a hospital has been sanctioned no building has come up. In Kerebilichi in Channagiri though there is a taluk, hospital there is no doctor for the last four or five years.

So far as P.W.D. is concerned, under Shanti Sagar hardly 3000 acres are irrigated. The area has become mostly useless though it has 10,000 acres of waterspread area. It is causing havoc to 20 villages situated round about that tank and during the rainy season if the tank is full many villages will be under water. The atchkat of this tank is irrigable by the Bhadra reservoir. The people of this area have been agitating that this inflow of water may be stopped or sluice may be lowered down so that the surrounding villages may not stand to suffer. I find that in the budget also there is no mention of Shanti Sagar tank, I want to know whether the Government is going to take action because it is an urgent matter which calls for attention of the Government. Nearly 5000 acres can be brought under cultivation if the wasteweir of this tank is lowered or some tanks are built on upstream which feed water to this tank.

With these remarks, I wish to thank the Speaker for having given me the opportunity to speak.

11-30 A.M.

†ಶ್ರೀ ಎಸ್. ಎಚ್. ಪುಟ್ಟರಂಗನಾಥ್ (ಬೇಲೂರು).—ಮಾನ್ಯ ಸಭಾಪತಿಯವರೇ, ಅನೇಕ ಸಂದರ್ಭಗಳಲ್ಲಿ ಕೆಲವು ಸದಸ್ಯರು ವಿರೋಧ ಪಕ್ಷದವರು ಸದಾ ಕಾಲ ಈ ಸಭೆಯಲ್ಲಿ ವಿರೋಧವನ್ನೇ

(ಶ್ರೀ ಎಸ್. ಎಚ್. ಪುಟ್ಟರಂಗನಾಥ್)

ವ್ಯಕ್ತಪಡಿಸುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಹೇಳುವುದಾದರೆ ವಿದ್ಯಾಭ್ಯಾಸದ ಇಲಾಖೆಯಲ್ಲಿ ಎಷ್ಟು ಅನ್ಯಾಯವಾಗುತ್ತಿದೆಯೆಂದರೆ ಸರಕಾರ ನ್ಯಾಯವಾಗಿ ಯಾರಿಗೆ ಯಾವ ಮಾನ್ಯತೆ ಕೊಡಬೇಕೋ ಅದನ್ನು ಕೊಡುತ್ತಿಲ್ಲ. ಪ್ರೈಮರಿ ಶಾಲೆ ಉಪಾಧ್ಯಾಯರ ಬಗ್ಗೆ ನಡೆದು ಕೊಳ್ಳುತ್ತಿರುವ ರೀತಿಯೇನಿದೆ ಅದು ಸರಿಯಲ್ಲ. ಪ್ರೈಮರಿ ವಿದ್ಯಾಭ್ಯಾನ ಪದ್ಧತಿಯಲ್ಲಿ ಹಲವಾರು ತಿದ್ದುಪಡಿಗಳಾಗಬೇಕು, ಈ ಬಗೆಗೆ ಸರಕಾರ ಹೆಚ್ಚು ಗಮನ ಕೊಟ್ಟಿಲ್ಲ. ಉಪಾಧ್ಯಾಯರನ್ನು 2—3 ತಿಂಗಳಿಗೊಂದು ಸಲ ವರ್ಗ ಮಾಡುವುದು ಮತ್ತು ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಪಿ.ಯು.ಸಿ. ತರಗತಿ ಸೇರಿಸುವುದು, ಕಾಲೇಜುಗಳಲ್ಲಿ ಪ್ಯಾಸಂಗ ಮಾಡುವವರಿಗೆ ಫೀಜನ್ನು ಜಾಸ್ತಿಮಾಡುವುದು ಇದೆಲ್ಲಾ ನೋಡಿದರೆ ನಿಜವಾಗಿಯೂ ಕೂಡ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ಸರಕಾರ ಕೊಟ್ಟಿದೆಯೇ ಎಂದು ಯೋಚನೆ ಮಾಡಿದರೆ ಸರಿಯಾದ ರೀತಿಯಲ್ಲಿ ಕೊಡುತ್ತಿಲ್ಲ ಎಂದು ವಿರೋಧ ವನ್ನು ಈ ಬಗ್ಗೆ ಸೂಚಿಸಬೇಕಾಗಿದೆ.

ವ್ಯವಸಾಯದ ಇಲಾಖೆಯಲ್ಲಿ ಫರ್ಟಿಲೈಜರ್ಸ್, ಬೀಜ, ಹೊರದೇಶದಿಂದ ಬರುವ ಟೆಕ್ನೀಷಿಯನ್ಸ್ ಮುಂತಾದುವುಗಳ ವಿಚಾರದಲ್ಲಿ ವ್ಯವಸಾಯಕ್ಕೆ ಹೆಚ್ಚು ಆದ್ಯತೆ ನೀಡಬೇಕೆಂದು ಹೇಳುವಾಗ ಸರಕಾರ ಅನುಸರಿಸುತ್ತಿರುವ ನೀತಿಯು ಸರಿಯಾಗಿಲ್ಲ. ಈಗ ಕೊಡುತ್ತಿರುವ ಈ ಎಲ್ಲ ಸೌಲಭ್ಯಗಳೂ ಕೂಡ ಬಹುಶಃ ಕಾಂಗ್ರೆಸ್‌ನಲ್ಲಿರುವ ಹಲವು ಮುಖಂಡರಿಗೇ ಸೇರುತ್ತಿವೆ, ಇದಕ್ಕೆ ನಿದರ್ಶನ ಬೇಕಾದರೆ ಕೊಡುತ್ತೇನೆ. ಫರ್ಟಿಲೈಜರ್ಸ್ ಮತ್ತು ಬೀಜಗಳ ಸ್ಯಾಂಪಲ್ಲನ್ನು ಅಮೇರಿಕಾದವರು ಕಳಿಸುತ್ತಾರೆ. ಆದರೆ ಅವನ್ನು ಸಕಾಲದಲ್ಲಿ ಒದಗಿಸಿ ರೈತರು ಬೆಳೆ ಹೆಚ್ಚು ತೆಗೆಯಲು ಅವಕಾಶ ಮಾಡಿಕೊಟ್ಟು ವ್ಯವಸಾಯಕ್ಕೆ ಆದ್ಯತೆ ಕೊಡುತ್ತಾರೆಂದು ಹೇಳುವುದು ಸತ್ಯಕ್ಕೆ ದೂರವಾದುದು. ಹಾಸನದಲ್ಲಿ ಈ ರೀತಿ ನಡೆದಿರುವುದನ್ನು ಸಭೆಯ ಮುಂದಿಡುತ್ತೇನೆ. ಬಹುಶಃ ಈಗ ಕಾಂಗ್ರೆಸ್ಸಿನಿಂದ ಹೊರಬಂದಿರುವ ವ್ಯಕ್ತಿ ಗೊಬ್ಬರ ಮತ್ತು ಟೆಕ್ನೀಷಿಯನ್ ತನ್ನ ಜಮೀನಿಗೆ ಉಪಯೋಗ ಮಾಡಿಕೊಂಡಿದ್ದಾರೆ. ಬೇಕಾದಷ್ಟು ಸುಧಾರಣೆಯಾಗಬೇಕೆಂದು ಹೇಳುತ್ತೇವೆ, ಆದರೆ ಟೆಕ್ನೀಷಿಯನ್ಸ್ ಕೆಲವರ ಜಮೀನುಗಳಲ್ಲಿ ಮಾತ್ರ ಕೆಲಸ ಮಾಡುತ್ತಾರೆ, ಟ್ರಾಕ್ಟರುಗಳೂ ಕೂಡ ಕೆಲವರಿಗೆ ಮಾತ್ರ ದೊರಯುತ್ತವೆ. ನಿಜವಾಗಿಯೂ ಸರಕಾರ ಇದನ್ನೆಲ್ಲಾ ತನಿಖೆ ಮಾಡಿದೆಯೇ ಎಂದು ವ್ಯಸನದಿಂದ ಕೇಳಬೇಕಾಗಿದೆ.

ಅಗ್ರಿಕಲ್ಚರಲ್ ಇನ್‌ಕಂ ಟಾಕ್ಸ್ ಹಾಕುತ್ತೀರಿ, ಲ್ಯಾಂಡ್‌ಟ್ಯಾಕ್ಸ್ ಹಾಕುತ್ತೀವೆ ಎಂದು ಹೇಳಿದಿರಿ. ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕುವುದರಿಂದ ರೈತರು ಒಬ್ಬ ಗುಮಾಸ್ತನನ್ನು ಇಟ್ಟುಕೊಳ್ಳಬೇಕಾಗುತ್ತದೆ. ಬಹುಶಃ ಇದರಿಂದ ಅವನಿಗೆ ಬರಕ್ಕಿ ಖರ್ಚು ಜಮಾನಿನಲ್ಲಿ ಆಗತಕ್ಕ ಬೆಳೆ ಒಷ್ಟು ಬರುತ್ತದೆಯೋ ಅದನ್ನು ಹೋಲಿಸಿ ನೋಡಿದರೆ ಸರ್ಕಾರಕ್ಕೆ ಕೊಡಬೇಕಾದ ಬಾಕಿಯೇ ಜಾಸ್ತಿಯಾಗುತ್ತದೆ ಎಂದು ಕಾಣುತ್ತದೆ. ಒಬ್ಬ ಗುಮಾಸ್ತನನ್ನು ಇಟ್ಟುಕೊಳ್ಳಬೇಕಾದರೆ ತಿಂಗಳಿಗೆ ಕೊನೆಪಕ್ಷ ೫0-6೦ ರೂಪಾಯಿ ಆದರೂ ಖರ್ಚು ಮಾಡಬೇಕು. ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್‌ನ್ನು ಸರಕಾರದವರು ರದ್ದುಮಾಡುವುದು ಬಹಳ ಮುಖ್ಯವಾದದ್ದು. ಏಕೆಂದರೆ ಅದನ್ನು ಜಾರಿಗೆ ತಂದ ಪಕ್ಷದಲ್ಲಿ ರೈತರಿಗೆ ಬಹಳ ಕಷ್ಟವಾಗುತ್ತದೆ ರೈತ ಲೆಕ್ಕಪತ್ರಗಳನ್ನು ಇಡುವುದರಲ್ಲೇ ಕಾಲವನ್ನು ಕಳೆಯಬೇಕಾಗುತ್ತದೆ. ಆದ್ದರಿಂದ ಅದನ್ನು ರದ್ದುಮಾಡಬೇಕೆಂದು ಸರ್ಕಾರದ ಗಮನ್ನು ಬೇಡಿಕೊಳ್ಳುತ್ತೇನೆ.

ಸೋಷಿಯಲ್ ವೆಲಫೇರ್ ತೆಗೆದುಕೊಂಡರೆ, ಸೆಂಟ್ರಲ್ ಗವರ್ನಮೆಂಟ್‌ನವರು ಕೊಡತಕ್ಕ ಸಹಾಯ ಧನವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡಿದ್ದಾರೆಯೇ ಎಂಬ ಅಂಕಿಅಂಶಗಳನ್ನು ತೋರಿಸಿಲ್ಲ ಮತ್ತು ಈ ಸಾಲ ಬಜೆಟ್ ಅಲಾಟ್‌ಮೆಂಟ್‌ನಲ್ಲಿ ಎಷ್ಟು ಹಣವನ್ನು ಅವರಿಗೆ ಪೀಸಲಾಗಿಟ್ಟಿದೆ ಎಂಬುದರ ಬಗ್ಗೆ ಸೂಚನೆಯನ್ನು ಕೊಟ್ಟಿಲ್ಲ. ಅವರು ಕೊಟ್ಟಿರುವುದರಲ್ಲಿ ಮೂರುವರೆ ಕೋಟಿ ರೂಪಾಯಿಗಳನ್ನು ಲೈಫ್ ಇನ್ಷೂರೆನ್ಸ್ ಕಂಪೆನಿಯಿಂದ ಸಾಲ ತೆಗೆದುಕೊಂಡು ಮನೆ ಕಟ್ಟಲಿಕ್ಕೆ ಕೊಟ್ಟಿವ್ನೇವೆ ಎಂದು ಹೇಳುತ್ತಾರೆ. ಇನ್ನು ವಿದ್ಯಾರ್ಥಿಗಳ ಬಗ್ಗೆ ಹೇಳುವುದಾದರೆ. 217 ಗವರ್ನಮೆಂಟ್ ಹಾಸ್ಟೆಲ್‌ಗಳನ್ನು ಮಾಡಿದ್ದಾರೆ, 112 ಬಿಡೆಡ್ ಹಾಸ್ಟೆಲ್‌ಗಳನ್ನು ತೆರೆದಿದ್ದರೆ, 102 ಗರ್ಲ್ಸ್ ಹಾಸ್ಟೆಲ್‌ಗಳನ್ನು ತೆರೆದಿದ್ದಾರೆ; ಈ ಹಾಸ್ಟೆಲುಗಳ ನೈರ್ಮಲ್ಯತೆಯ ಬಗ್ಗೆ ಒಂದು ಯೋಜನೆಯನ್ನೂ ಮಾಡಿಲ್ಲ ಇದನ್ನು ಸರ್ಕಾರದವರು ಯೋಚನೆ ಮಾಡಬೇಕು. ಹರಿಜನರಿಗೆ ಕೊಡತಕ್ಕ ಫ್ರೀ ಲ್ಯಾಂಡ್ಸ್ ಏನಿದೆ ಅದನ್ನು ಕೊಡುವಾಗ ಒಂದು ನಿರ್ಬಂಧವನ್ನು ಹಾಕಿದ್ದಾರೆ. ಸಾಗುವಳಿ ಚೀಟಿಯನ್ನು ಕೊಡತಕ್ಕ ಕಾಲದಲ್ಲಿ ಆ ಜಮೀನನ್ನು ಯಾರಿಗೂ ಪರಭಾರೆ ಮಾಡಕೂಡದು, ಮಾರಕೂಡದು ಎಂಬ ನಿರ್ಬಂಧವನ್ನು ಹಾಕಿದ್ದಾರೆ. ಈ ಸಂದರ್ಭದಲ್ಲಿ ಒಂದು ಮನವಿಯನ್ನು

ಮಾಡಿಕೊಳ್ಳುತ್ತೇನೆ. ಸರ್ಕಾರದವರು ಜಮೀನನ್ನು ಕೊಟ್ಟು ಒಂದು ವೇಳೆ ಅವನು ಮಾರಿಕೊಂಡರೆ ಅವನಿಗೆ ಶಿಕ್ಷೆಯಾಗುತ್ತದೆ. ಅವನನ್ನು ಮಾತ್ರ ಶಿಕ್ಷೆಗೆ ಗುರಿಪಡಿಸುತ್ತೀರಿ ಆದರೆ ಜಮೀನು ಕೊಂಡು ಕೊಳ್ಳುವವನನ್ನು ಯಾವ ಶಿಕ್ಷೆಗೂ ಗುರಿಮಾಡುವುದಿಲ್ಲ. ಕೊಂಡುಕೊಳ್ಳುವವನಿಗೆ ಏನು ಶಿಕ್ಷೆ ಮಾಡ ಬೇಕು ಎಂಬುದರ ಬಗ್ಗೆ ಕ್ರಮ ಸೂಚಿಸಿಲ್ಲ. ಆದ್ದರಿಂದ ಆ ಜಮೀನನ್ನು ಕೊಂಡುಕೊಳ್ಳುವವನಿಗೂ ಶಿಕ್ಷೆಯಾಗುತ್ತದೆ ಎಂಬ ಕಾನೂನು ಮಾಡಿದರೆ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯ ಇಲ್ಲವೇ ಇದ್ದರೆ ತಾವು ಏನೆ ಯೋಜನೆಯನ್ನು ಮಾಡಿದರೂ ಅದು ಫಲಪ್ರದವಾಗುವುದಿಲ್ಲ ಎಂದು ಒತ್ತಾಯ ಪೂರ್ವಕ ವಾಗಿ ಹೇಳುತ್ತೇನೆ. ಮತ್ತು ಇದುವರೆಗೂ ಕೊಟ್ಟಿರತಕ್ಕ ಜಮೀನುಗಳನ್ನು ಮಾರಿಕೊಂಡಿದ್ದರೆ ಬಹುಶಃ ಅದೆಲ್ಲಾ ಕಾಂಗ್ರೆಸ್‌ನವರ ಹತ್ತಿರವೇ ಸೇರಿದೆ, ಅವು ಯಾರ ಹತ್ತಿರ ಸೇರಿದೆ ಎಂಬುದು ಕೂಡ ನನಗೆ ಚೆನ್ನಾಗಿ ಗೊತ್ತು ಅಂಕೆ ಅಂಶ ಕೂಡಿ ಎಂದರೆ ನಮ್ಮ ಡಿಸ್ಟ್ರಿಕ್ಟ್‌ನಲ್ಲಿರತಕ್ಕವರು ಯಾರ್ಯಾರು ಕಾಂಗ್ರೆಸ್ ಮುಖಂಡರು ಏನೇನು ಕೆಲಸ ಮಾಡಿದ್ದಾರೆ, ಹರಿಜನರಿಗೆ ಕೊಟ್ಟಂಥ ಜಮೀನನ್ನು ತಮ್ಮ ಹೆಸರಿಗೆ ಬರಿಸಿ ಕೊಂಡಿದ್ದಾರೆ ಮತ್ತು ಅವರಿಂದಲೇ ಕೆಲಸ ಮಾಡಿಸುತ್ತಾ ಇದ್ದಾರೆ ಆ ವಿವರವನ್ನು ಬೇಕಾದರೆ ಕೊಡುತ್ತೇನೆ.

ಶ್ರೀ ಬಿ. ರಾಜಯ್ಯ.—ಪಟ್ಟಿಕೊಡಿ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಕೊಡುತ್ತೇನೆ. ಇನ್ನು ಕೋ ಆಪರೇಷನ್ ಡಿಪಾರ್ಟ್‌ಮೆಂಟಿನ ವಿಷಯ ತೆಗೆದುಕೊಂಡರೆ, ಸರ್ಕಾರದವರು ಬೇಕಾದಷ್ಟು ಸಂಸ್ಥೆಗಳನ್ನು ತರೆದು ಅಂದಾಜಿನ ಮೇಲೆ ನೋಡಿದರೆ ಹತ್ತು ಹಳ್ಳಿಗಳಿಗೆ ಒಂದು ಸೊಸೈಟಿ ಕೊಟ್ಟಿದ್ದಾರೆ. ಈ ಸೊಸೈಟಿ ಗಳಲ್ಲಿ ಸರಿಯಾಗಿ ಕೆಲಸವಾಗುತ್ತಾ ಇದೆಯೇ ಸರ್ಕಾರದವರಿಗೆ ಆದಾಯ ಬರುತ್ತಾ ಇದೆಯೇ ಎಂಬುದನ್ನು ಯೋಚನೆ ಮಾಡಿನೋಡಿದರೆ ನಿಜವಾಗಿಯೂ ಆದಾಯ ಎಷ್ಟು ಬರಬೇಕಾಗಿತ್ತೋ ಅಷ್ಟು ಆದಾಯ ಇವತ್ತು ಕಾಣುತ್ತಾ ಇಲ್ಲ. ಹಾಗಾದರೆ ಸರ್ಕಾರದವರು ಖರ್ಚು ಮಾಡಿರತಕ್ಕ ಹಣ, ಅವರಿಗೆ ಕೊಟ್ಟಿರತಕ್ಕ ಹಣದ ಬಗ್ಗೆ ಏನಾದರೂ ತನಿಖೆ ನಡೆಸಿದ್ದಾರೆಯೇ ಎಂಬುದನ್ನು ನೋಡಿದ್ದೇ ಆದರೆ ಆಡಿಟ್ ರಿಪೋರ್ಟ್‌ನಲ್ಲಿ ಕೊಟ್ಟಂಥ ಅಂಕೆ ಅಂಶಗಳ ಮೇಲೆ ಹೇಳುವುದಾದರೆ ಈ ಆಡಿಟ್ ಡಿಪಾರ್ಟ್‌ಮೆಂಟ್ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಹಾಸನ ಜಿಲ್ಲೆಯಲ್ಲಿ ಇರತಕ್ಕ ಸೊಸೈಟಿಗಳಲ್ಲಿ ಒಂದೂ ಕೂಡ ಸರಿಯಾಗಿ ನಡೆಯುತ್ತಾ ಇಲ್ಲ ಎಂದು ಹೇಳುವುದಕ್ಕೆ ಒಂದು ನಿದರ್ಶನವನ್ನು ಕೊಡುತ್ತೇನೆ. ಎಷ್ಟೋ ಸೊಸೈಟಿಗಳನ್ನು ಮುಚ್ಚ್ಯ ಬೇಕಾದ ಸಂದರ್ಭ ಬಂದಿದೆ. ಇದರ ಬಗ್ಗೆ ಸರ್ಕಾರದವರು ಹತ್ತು ವರ್ಷಗಳ ಆಡಿಟ್ ಹೊಸದಾಗಿ ಮಾಡಿಸಿದ್ದೇ ಆದ ಪಕ್ಷದಲ್ಲಿ ಎಷ್ಟೋ ಜನಗಳು ಸಿಕ್ಕಿಬೀಳುತ್ತಾರೆ ಎಂಬ ಭರವಸೆಯನ್ನು ಕೊಡುತ್ತೇನೆ.

ಸಿಟಿ ಫ್ಯಾಮಿಲಿ ಪ್ಲಾನಿಂಗ್ ಬ್ಯೂರೋ ಅಂತ ಹೇಳಿ ಬೆಂಗಳೂರು ಸಿಟಿಯಲ್ಲಿ ಒಂದು ಸಂಸ್ಥೆ ಯನ್ನು ಮಾಡಿದ್ದೀರಿ. ಇದರ ಬಗ್ಗೆ ಯಾರೂ ಕೂಡ ಇದು ಏನಾಗಿದೆ ಎಂಬುದರ ವಿಷಯದಲ್ಲಿ ಯೋಚನೆ ಮಾಡಿಲ್ಲ. ಅಲ್ಲಿ ಒಬ್ಬ ಆಫೀಸರು ಪುರ್‌ಟೈಂ ವರ್ಕರ್ ಇದ್ದಾರೆ. ಅವರು ಮೆಡಿಕರ್ ಕಾಲೇಜು ಅಟೆಂಡ್ ಮಾಡುತ್ತಾ ಇದ್ದಾರೆ. ಹಾಗಾದ ಮೇಲೆ ಅಲ್ಲಿ ಕೆಲಸ ಯಾವರೀತಿ ನಡೆಯು ತ್ತದೆ ಎಂಬುದರ ಬಗ್ಗೆ ಯಾರೂ ಯೋಚನೆ ಮಾಡಿಲ್ಲ. ಫ್ಯಾಮಿಲಿ ಪ್ಲಾನಿಂಗ್ ಫಲಪ್ರದವಾಗಿಲ್ಲ ಎಂದು ಹೇಳುತ್ತಾ ಇದ್ದೀರಿ, ಪುರ್‌ಟೈಂ ವರ್ಕರ್ ಕಾಲೇಜಿಗೆ ಅಟೆಂಡ್ ಮಾಡುವುದರಿಂದ ಕೆಲಸ ಆಗುತ್ತದೆಯೇ ಎಂಬ ಪ್ರಶ್ನೆಯನ್ನು ಕೇಳುತ್ತೇನೆ. ನ್ಯಾಯವಾಗಿ ಕೆಲಸ ಮಾಡುತ್ತಾ ಇರುವವನಿಗೆ ಕೆಲಸ ಕೊಡುತ್ತಾ ಇಲ್ಲ. ಕೆಲಸ ಮಾಡದೆ ಕಳ್ಳತನ ಮಾಡತಕ್ಕವರಿಗೆ ಹೆಚ್ಚಿನ ಅವಕಾಶ ಕೊಡುತ್ತಾ ಇದ್ದೀರಿ, ಅದನು ನಾನು ವಿರೋಧಿಸುತ್ತೇನೆ.

ಇನು ಅಫಿಷಿಯರ್ಸ್ ಬಗ್ಗೆ ತೆಗೆದುಕೊಂಡರೆ ಬೆಂಗಳೂರಿನಲ್ಲಿರತಕ್ಕ ಅಫಿಷಿಯರ್ ಇಲ್ಲೇ ಕೆಲಸಕ್ಕೆ ಸೇರಿ ಇಲ್ಲೇ ರಿಟೈರ್ ಆಗತಕ್ಕದ್ದು ಒಂದು ಸಂಪ್ರದಾಯ, ಅದು ಏಕೋ ಏನೋ ಗೊತ್ತಿಲ್ಲ ಬಹುಶಃ ಅಂತಹವರ ಸಂಖ್ಯೆ ಎಣಿಕೆ ಮಾಡಿದ್ದೇ ಆದರೆ ಬೇಕಾದಷ್ಟು ಜನ ಸಿಕ್ಕುತ್ತಾರೆ. ಆದರೆ ಹೊರಗಡೆ ಇರತಕ್ಕ ಅಫಿಷಿಯರ್‌ನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾವಣೆ ಮಾಡು ತ್ತೀರಿ ಇದನ್ನು ನೋಡಿದರೆ ಒಂದು ವರ್ಷಕೂಡ ಪೂರ್ತಿಯಾಗಿರುವುದಿಲ್ಲ, ಎರಡು ವರ್ಷ ಆಗಿರುವು ದಿಲ್ಲ, ಮೂರುವರ್ಷ ಕೂಡ ಆಗಿರುವುದಿಲ್ಲ ಅಂತಹ ಜನಗಳನ್ನು ವರ್ಗಾವಣೆ ಮಾಡುವುದು ನಿಜ ವಾಗಿಯೂ ತಪ್ಪು ಅದನ್ನು ತಪ್ಪಿಸಬೇಕು. ಮತ್ತು ಬೆಂಗಳೂರಿನಲ್ಲಿರತಕ್ಕ ಅಫಿಷಿಯರ್ಸ್ ಬಗ್ಗೆ ತನಿಖೆ ಮಾಡಿಸಬೇಕೆಂದು ಹೇಳಿ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟಂಥಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ ಮಾತನು ಮುಗಿಸುತ್ತೇನೆ.

† Sri N. B. SIRDESAI (Khanapur).—Sir, at the outset I must thank you for giving me an opportunity to express my views on the Vote on Account Appropriation Bill. On going through the Demands for Grants and from my personal knowledge as regards the subject, I am placing before the House that most of the schemes of the Mysore Government are on paper only; implementation of the schemes has not been successful. That is because the schemes are formulated at the State level and they are not formulated at village level in consultation with the Village Panchayats, Taluk Boards and the villagers.

As regards land revenue, I wish to express my view that the Mysore Government should stick to its declaration as regards the abolition of land revenue, because if the Government does not stick to its declaration in this behalf, people will think that the declaration of the abolition of land revenue was an election stunt and they will lose faith in the Government.

(*Interruption*).

It is true that at present the people have no faith in the Government and hereafter they will not have any faith at all. Now, the elections are over. So, the Government should stick up to its policy and remove the burden of land revenue on the poor cultivators just to give an impetus to the poor cultivators to grow more food. Action must be taken as early as possible.

As regards the police, really speaking the police are meant for maintaining law and order, but it is deplorable to note that the police are taking the law in their own hands and they are harassing the people. A number of instances can be quoted of police harassment. I may quote here the example from my own place of Khanapur. On 25th instant at night time at 10-30, the P.S.I. at the instruction of the revenue authorities attached the paddy stock of a poor cultivator. Though the cultivator had fulfilled the levy demand, injustice was done to him. His family consists of 20 members and the stock of paddy he had with him was not sufficient even for the maintenance of his family. Like that in many ways the revenue officers and the police officers are causing harassment to the cultivators. Let me bring to the notice of the House that the demand registers prepared are quite incorrect. The acreage shown in the demand register for levy and the acreage shown in the record of rights does not tally. Injustice is being caused to the people at the hands of the Government officers. While fixing up the quantum of levy the gap between the price of paddy and the price in the open market is not taken into consideration. The quantum is fixed by sitting at Bangalore or Delhi and the exact situation is not taken into consideration by the officers.

Mr. SPEAKER.—The time is over. The member can speak on the budget.

Now I have to make some announcements.

ELECTION OF MEMBERS TO THE PRIVATE MEMBERS' BILLS AND RESOLUTIONS COMMITTEE

Results.

MR. SPEAKER.—As the number of nominations is equal to the number of seats to be filled, the following members are declared elected to the Committee on Private Members' Bills and Resolutions :

1. Sri Amare Gowda
2. Sri S. Chandrakantha
3. Sri M. H. Jayaprakash Narayan
4. Sri H. C. Linga Reddy
5. Sri A. Nanjappa
6. Sri K. P. Nadagouda
7. Sri V. N. Patil
8. Sri M. M. J. Sadyojatha
9. Sri K. Singari Gowda
10. Sri K. H. Srinivasa

Under sub-rule (1) of Rule 267 (A) of the Rules of Procedure and Conduct of Business in the Legislative Assembly the Deputy Speaker shall be the Chairman of the Committee.

ELECTION OF MEMBERS OF THE HOUSE COMMITTEE

Results.

MR. SPEAKER.—As the number of nominations to the House Committee is equal to the number of seats to be filled the following members are declared elected to the House Committee.

1. Sri S. V. Agnihotri,
2. Sri M. K. Bomme Gowda,
3. Sri K. P. Chikke Gowda,
4. Sri Solur Siddappa,
5. Smt. Champabai Bhogale,
6. Smt. K. Leelavathi Rai
7. Smt. Nagamma Sheshappa
8. Smt. Winnifred F. Fernandes.

ELECTION OF MEMBERS TO THE ESTIMATES COMMITTEE

Results.

MR. SPEAKER.—As the number of nominations to the Committee on Estimates is equal to the number of seats to be filled, the following members are declared elected to the Committee on Estimates :

1 Sri Bhaskar Shetty
2 Sri B. A. Bolashetty
3 Sri H. D. Deve Gowda
4 Sri B. R. Dhananjaya
5 Sri B. L. Gowda
6 Sri N. M. Kotrabasiah Sogi
7 Sri M. S. Krishnan
8 Sri R. Muniswamiah
9 Smt. K. S. Nagaratnamn a
10 Sri H. N. Nanje Gowda
11 Sri G. Rame Gowda
12 Sri B. B. Sayanak
13 Sri G. Thammanna
14 Sri Tirumaladevaraya
15 Sri S. B. Vastrad

Under sub-rule (3) of Rule 196 of the Rules of Procedure and Conduct of Business in the Legislative Assembly, I appoint Sri B. L. Gowda as the Chairman of the Committee.

ELECTION OF MEMBERS TO THE COMMITTEE OF PRIVILEGES

Results.

MR. SPEAKER.—As the number of nominations to the Committee of Privileges is equal to the number of seats to be filled, the following members are declared elected to the Committee of Privileges :

1 Sri Abdul Khudus Anwar
2 Sri M. A. Amalorpavam
3 Sri M. Y. Ghorpade
4 Sri M. Mallappa

5 Sri M. R. Patil

6 Sri Ratnakumar Shetty

7 Sri B. Vittaldas Shetty

Under rule 257(1) of the Rules of Procedure and Conduct of Business in the Mysore Legislative Assembly, I hereby nominate the following members to the above Committee :

1 Sri Kondajji Basappa

2 Sri Sharana Gowda

Under sub-rule (3) of Rule 196 of the Rules of Procedure and Conduct of Business in the Mysore Legislative Assembly, I hereby nominate Sri M. R. Patil as Chairman of the Committee.

MYSORE APPROPRIATION (VOTE ON ACCOUNT) BILL, 1967.

Motion to consider (contd).

†ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ).—ಮಾನ್ಯ ಸಭಾಪತಿಗಳೇ, ನಮ್ಮ ಚಿಕ್ಕಬಳ್ಳಾಪುರದ ತಾಲ್ಲೂಕಿನಲ್ಲಿ ಪೊದಲನೆಯ ಪಂಚವಾರ್ಷಿಕ ಯೋಜನೆಯ ಪ್ರಾರಂಭವಾದ ಕಾಲದಲ್ಲಿ ಅಲ್ಲಿ ಜಕ್ಕಲಮಡುಗು ಎಂಬ ಒಂದು ಪಾ ಜೆಕ್ಟನ್ನು ಮಾಡುವುದಕ್ಕೆ ಪ್ರಯತ್ನಮಾಡಿದರು. ಅದರ ಕೆಳಗೆ 12 0 ಎಕರೆ ಸಾಗುವಳಿಗೆ ಬರುತ್ತದೆ. ಅಷ್ಟು ಜಮೀನು ಅಲ್ಲಿ ನೀರು ಸಾಗುವಳಿಗೆ ಬರುವುದಾಗಿದ್ದರೂ ಆ ಕೆಲಸವು ಈಗ 4 ನೇ ಪಂಚವಾರ್ಷಿಕ ಯೋಜನೆಯು ಪ್ರಾರಂಭವಾಗಿದ್ದರೂ ಮುಗಿದಿಲ್ಲ. ಈ ವರ್ಷದ ಬಡ್ಜೆಟ್ಟಿನಲ್ಲಿ ಅದನ್ನೂ ಸೇರಿಸಿ ಆ ಕೆಲಸವನ್ನು ಬೇಗ ಮುಗಿಸಬೇಕೆಂದು ನಾನು ಮಾನ್ಯ ಪಿ.ಡಬ್ಲ್ಯೂ.ಡಿ. ಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಹಾಗೆಯೇ ನಮ್ಮ ಚಿಕ್ಕಬಳ್ಳಾಪುರ ಟೌನಿನ ಕುಡಿಯುವ ನೀರು ಸರಬರಾಯಿ ವಿಚಾರಕ್ಕೆ ಬಂದರೆ ಆ ಕೆಲಸಕ್ಕೆ 60 ಲಕ್ಷ ರೂಪಾಯಿ ಮಂಜೂರಾಗಿ ಇಲ್ಲಗೆ 10 ವರ್ಷಗಳ ಮೇಲಾಯಿತು. ಆದರೆ ತಹಲ್‌ವರೆಗೂ ಆ ಕೆಲಸವನ್ನೂ ಮುಗಿಯಲಲ್ಲ. ಜನರು ಅಲ್ಲಿ ನೀರು ಏನು ಬರುತ್ತದೋ ಇಲ್ಲವೋ, ನಾವೇನು ಆ ನೀರನ್ನು ಕುಡಿಯುತ್ತೇವೆಯೋ ಇಲ್ಲವೋ ಅನ್ನುವಂಥ ಸ್ಥಿತಿ ಉಂಟಾಗಿದೆ. ಆದುದರಿಂದ ಈ ಕೆಲಸವನ್ನೂ ಸಹಾ ಈ ವರ್ಷದ ಬಡ್ಜೆಟ್ಟಿನಲ್ಲೇ ಸೇರಿಸಿ ಮಾನ್ಯ ಪಿ.ಡಬ್ಲ್ಯೂ.ಡಿ ಸಚಿವರು ಅದನ್ನೂ ಮುಗಿಸುವಂತೆ ಮಾಡಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಅಲ್ಲಿ ರಂಗಧಾಮ ಫೀಡರ್ ಛಾನಲ್ಲಿಗೆ ಈಗಾಗಲೇ 3 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಅದು 10 ವರ್ಷದ ಮೇಲಾಯಿತು. ಈತಹಲ್ ವರೆಗೂ ಇನ್ನೂ ಮುಕ್ಕಾಲು ಕೆಲಸ ಸಹಾ ಆಗಿಲ್ಲ. ಅದೂ ಕೂಡ ಅರಗೊರತೆಯಾಗಿ ನಿಂತು ಹೋಗಿದೆ. ಇದನ್ನು ಬೇಗ ಪೂರೈಸಿದರೆ ಇದರ ನೀರು ಹೊಸಕೋಟೆಯವರೆಗೂ ಬಂದು ಸಹಸ್ರಾರು ಎಕರೆಗೆ ನೀರು ಸರಬರಾಯಿ ಆಗುವುದು. ಹಿಂದೆ ಮಂತ್ರಿಗಳು ನಮ್ಮ ತಾಲ್ಲೂಕಿಗೆ ಭೇಟಿ ಕೊಟ್ಟಿದ್ದ ಕಾಲಕ್ಕೆ ಅಲ್ಲಿದ್ದ ಸ್ಥಳೀಯ ಅಧಿಕಾರಿಗಳಿಗೆ ಸಾಕಷ್ಟು ಬೇಗ ಕೆಲಸ ಮುಗಿಯುವಂತೆ ಎಚ್ಚರಿಕೆಯನ್ನು ಕೊಟ್ಟಿದ್ದಾಗ್ಗೂ ಅವರು ಉದಾಸೀನರಾಗಿದ್ದಾರೆ, ಕೆಲಸ ಮುಂದುವರಿಸಿಲ್ಲ. ಇದನ್ನು ಜಾಗ್ರತೆ ಮುಗಿಸಬೇಕೆಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಅಲ್ಲ ಅನೇಕ ಕೆರೆಗಳನ್ನು ಜೀರ್ಣೋದ್ಧಾರ ಮಾಡಬೇಕಾಗಿದ್ದರೂ ಇಲ್ಲಿಯತನಕ ಒಂದು ಕೆರೆಯ ನೀರನ್ನೂ ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿಲ್ಲ. ಹೀಗಾದರೆ ಅಲ್ಲಿನ ಜನರು ಹೇಗೆ ಬದುಕಬೇಕೋ ದೇವರೇ ಬಲ್ಲ? ಈ ಕೆಲಸಗಳನ್ನು ಬೇಗ ಮುಗಿಸುವಂತೆ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ. ಕೈಗಾರಿಕೆಗಳನ್ನು ನೋಡಿದರೆ, ಯಾವಾಗಲೂ ಬೆಂಗಳೂರಿನ ಸುತ್ತು ಮುತ್ತಲು ಕೈಗಾರಿಕೆಗಳನ್ನು ನಡೆಸತಕ್ಕಂಥವರಿಗೆ ಬೇಕಾದಷ್ಟು ಅನುಕೂಲಗಳನ್ನು ಕೊಟ್ಟು 5-6 ಮೈಲುಗಳ ದೂರದಲ್ಲ ಮಾಡುವುದಕ್ಕೆ ಲೈಸೆನ್ಸ್ ಕೊಡುತ್ತಿದ್ದಾರೆ. ಇದನ್ನು ತಪ್ಪಿಸಿ ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ಒಂದೊಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿಮಾಡಿಕೊಳ್ಳುತ್ತೇನೆ

(ಶ್ರೀ ಕೆ. ಎಂ. ಪುಟ್ಟಸ್ವಾಮಿ)

ಹೀಗೆ ಪ್ರತಿ ತಾಲ್ಲೂಕು ಕೇಂದ್ರಗಳಲ್ಲೂ ಒಂದೊಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಿದರೆ ಅಲ್ಲಿರುವ ರೈತವರ್ಗದವರಿಗೂ ಅನುಕೂಲ ಮತ್ತು ಅಲ್ಲಿದ್ದಂತಹ ನಿರುದ್ಯೋಗ ಸಮಸ್ಯೆಯೂ ಪರಿಹಾರವಾದಂತಾಗುತ್ತದೆ.

12-00 NOON.

ಇನ್ನು ಪಾನನಿರೋಧದ ವಿಷಯದಲ್ಲಿ ನಮ್ಮ ಆರ್ಥಿಕ ಮಂತ್ರಿ ಹೆಗ್ಗಡೆಯವರು ಬಹಳ ಯೋಗ್ಯವಾದ ಹೆಜ್ಜೆಯನ್ನು ತೆಗೆದಿದ್ದಾರೆ; ಇದನ್ನು ನಾನು ಅನುಮೋದಿಸುತ್ತೇನೆ. ನಮ್ಮ ಎದುರು ಪಕ್ಷದವರು, ಈ ಕಾಂಗ್ರೆಸ್‌ನವರು, ಅಥವಾ ಕಾಂಗ್ರೆಸ್ ಸರ್ಕಾರ ಏನಾದರೂ ಒಂದು ಒಳ್ಳೆಯ ಕೆಲಸ ಮಾಡಿದರೆ, ಅದಕ್ಕೆ ಎದುರು ಮಾತನಾಡುವುದು ಒಂದು ಚಟವಾಗಿಬಿಟ್ಟಿದೆ. ಆ ಚಟವನ್ನು ಅವರು ಬಿಡಬೇಕು. ಅವರು ಹೇಳುತ್ತಾರೆ—ಈಗ ನಮ್ಮಾರು ಜನರು ಕುಡಿಯುವುದನ್ನು ಬಿಟ್ಟು ಬಿಟ್ಟಿದ್ದಾರೆಂದೂ ಅದರಿಂದ ಬಹಳ ಅನುಕೂಲವಾಗುತ್ತದೆ ಎಂದೂ ಹೇಳುತ್ತಾರೆ. ನಮ್ಮ ವಿರೋಧಿ ಪಕ್ಷದವರನ್ನು ನೋಡಿದರೆ, ಬಹುಶಃ ಅವರು ಬಟ್ಟಿಸಾರಾಯಿಗೆ ಪ್ರೋತ್ಸಾಹ ಕೊಟ್ಟಂತೆ ಕಾಣುತ್ತದೆ. ಇವತ್ತಿನ ದಿವಸ ರೈತರಿಗೆ ಕೊಡತಕ್ಕ ಅಮೋನಿಯಂ ಸಲ್ಫೇಟಿನಿಂದ ಭಟ್ಟಿಸಾರಾಯಿಯನ್ನು ತಯಾರು ಮಾಡುತ್ತಿದ್ದಾರೆ. ಮತ್ತು ನವನಾಗರದಿಂದ ಕೂಡ ಇದನ್ನು ತಯಾರು ಮಾಡುತ್ತಿದ್ದಾರೆ. ಈಗ ಮಾನ್ಯ ಮಂತ್ರಿಗಳವರು ಕ್ಯಾಬಿನೆಟ್ಟಿನಲ್ಲಿ ಒಂದು ನಿರ್ಧಾರವನ್ನು ಈ ವಿಚಾರದಲ್ಲಿ ತೆಗೆದು ಕೊಳ್ಳುವವರಿದ್ದಾರೆ. ಅದನ್ನು ವಿಧಾನ ಮಾಡದೆ ತೆಗೆದುಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ. ಹಿಂದೆ ಮಹಾತ್ಮ ಗಾಂಧಿಯವರು "ಕುಡಿಯುವುದನ್ನು ನಾವು ನಿಲ್ಲಿಸಬೇಕು, ಅಂಥದನ್ನು ನಾವು ನಿಲ್ಲಿಸಬೇಕು, ಅಂಥದನ್ನು ನಾವು ಮಾಡಬಾರದು ಎಂದು ಹೇಳಿದರು. ಆವರೆ, ಅದೇ ಮಹಾತ್ಮ ಗಾಂಧಿಯವರು ಈ ಮೊದಲನೆಯ ಪಂಚವಾರ್ಷಿಕ ಯೋಜನೆ ಆಗುವಾಗ ಇದ್ದಿದ್ದರೆ, ಇಲ್ಲಿ ಆಗುವ ಅನಾಹುತಗಳನ್ನು ನೋಡಿ, ತಕ್ಷಣ ಇದನ್ನು ಜಾರಿ ಮಾಡುತ್ತಿದ್ದರೆಂದು ಕಾಣುತ್ತದೆ. ಆದರೆ, ಅವರು ಈಗ ಇಲ್ಲದೆ ಹೋಗಿದ್ದಾರೆ. ಆದ್ದರಿಂದ 20 ವರ್ಷಗಳಿಂದ ನಮ್ಮ ದೇಶದಲ್ಲಿ ಆದಂತಹ ಅನಾಹುತಗಳನ್ನು ಅರಿತು ನಮ್ಮ ಸರ್ಕಾರದವರು ಇದನ್ನು ತಕ್ಷಣ ಜಾರಿಗೆ ತಂದರೆ, ಆದರಿಂದ ಬರತಕ್ಕ ವರಮಾನವೂ ಜೆನ್ನಾಗಿದೆ ಮತ್ತು ಇನ್ನೂ ಅನೇಕ ಜನರು ಭಟ್ಟಿಸಾರಾಯಿ ಕುಡಿದು ಸಾಯುವುದನ್ನು ತಪ್ಪಿಸುವುದಕ್ಕೆ ಒಂದು ಅವಕಾಶವಾಗುತ್ತದೆ. ಆದ್ದರಿಂದ ನಮ್ಮ ಸರ್ಕಾರದವರು ಈಗ ಮಾಡಿರತಕ್ಕಂತಹ ನೀತಿ ಬಹಳ ಜೆನ್ನಾಗಿದೆ ಮತ್ತು ಆದಷ್ಟು ಜಾಗ್ರತೆ ನಮ್ಮ 19 ಜಿಲ್ಲೆಯೊಳಗೂ ಕೂಡ ಇದನ್ನು ಜಾರಿಗೆ ತರಬೇಕೆಂದು ಹೇಳಬಯಸುತ್ತೇನೆ. ನಮ್ಮ ಮಾನ್ಯ ಮಿತ್ರರಾದಂತಹ ಶ್ರೀ ವಾಟಾಳ್‌ನಾಗರಾಜರು ಜನರಿಗೆ ರೂಪಾಯಿಗೆ ಎರಡು ಸೇರು ಅಕ್ಕಿ ಸಿಗುವಂತೆ ಮಾಡುತ್ತೇವೆಂದು ಹೇಳಿ ಇಲ್ಲಿಗೆ ಗೆದ್ದು ಬಂದಿದ್ದಾರೆ. ಮತ್ತು ಈಗ ಬೆಂಗಳೂರಿನ ಜನರಿಗೆ ಹೆದರಿ ನಡೆಯುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ.—ನಾನು ಕೊಡುತ್ತೇನೆಂದು ಹೇಳಿಲ್ಲ. ಸರ್ಕಾರದವರು ಎರಡು ಸೇರು ಕೊಡಲಿ ಎಂದು ಹೋರಾಟ ಮಾಡಲು ಬಂದಿದ್ದೇನೆ. ಅದೇ ರೀತಿ ಇವರು ಸೊಳಾಯಿ ಮೂಲಕ ಎಲ್ಲಾ ಕಡೆಗಳಿಗೂ ಹೆಂಡವನ್ನು ಹಂಚುವುದಕ್ಕೆ ಪ್ರಯತ್ನ ಮಾಡಲಿ ಎಂದು ಹೇಳಬೇಕಾಗುತ್ತದೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಮಾನ್ಯ ಸಭಾಪತಿಯವರೇ, ಇವರು ಎದುರು ಪಕ್ಷದಲ್ಲಿರತಕ್ಕಂತವರು, ಪೊದಲು ನಮ್ಮ ಸಂಸ್ಥೆಯಿಂದ ಬಂದಂಥವರು. ನಾವು ಏನು ಗುರಿ ಇಟ್ಟುಕೊಂಡಿದ್ದೇವೆ, ಅದನ್ನು ಮರೆತು ಇವತ್ತಿನ ದಿವಸ ಅದಿಕಾರ ಸಿಗಲಿಲ್ಲ ಎಂದು ಎದುರು ಪಕ್ಷದಲ್ಲಿ ಕುಳಿತು ಆ ರೀತಿ ಮಾತನಾಡತಕ್ಕದ್ದು ಬಹಳ ಶೋಚನೀಯವಾದುದು. ಆದ್ದರಿಂದ ಪಾನನಿರೋಧದ ವಿಚಾರದಲ್ಲಿ ಸರ್ಕಾರದವರು ನಿಲುವನ್ನು ನ ನು ಅನುಮೋದಿಸುತ್ತಾ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ನನ್ಮಾನ್ಯ ಸಭಾಪತಿಗಳೇ, ಇಲ್ಲಿಯವರೆಗೂ ಕೆಲವರು ಅಪ್ರೊಪ್ರಿಯೇಶನ್ ಬಿಲ್ಲಿನ ಬಗ್ಗೆ ಹಾಗೂ 4 ತಿಂಗಳ ಬಜೆಟ್ಟಿನ ಬಗ್ಗೆ ಜೈಪುರಿ ಬೆಂಚಿನಿಂದ ಹಾಗೂ ವಿರೋಧಪಕ್ಷದ ಕಡೆಯಿಂದ ಮಾತನಾಡಿದ್ದಾರೆ. ನಾನಾದರೂ ಹೇಳುತ್ತೇನೆ, ವಿರೋಧಪಕ್ಷದವರು ಆದಷ್ಟುಮಟ್ಟಿಗೆ ಸಮಂಜಸವಾದ ಸಲಹೆಗಳನ್ನು ಕೊಟ್ಟು ಮಾತನಾಡಿದ್ದಾರೆಂದು ತಿಳಿದಿದ್ದೇನೆ. ಈಗ ಸರ್ಕಾರದವರು ಇದರಲ್ಲಿನ ಎಲ್ಲಾ ಅಂಕಿಅಂಶಗಳನ್ನು ಓದಗಿಸಿದ್ದಾರೆ, ಅದು ಬರೀ

ಅಂಕಿ ಅಂಶಗಳಿಂದ ತುಂಬಿದೆಯೇ ಹೊರತು, ಅದನ್ನು ಕಾರ್ಯತಃ ಮಾಡಿಲ್ಲ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಇದನ್ನು ಒಂದು ಉದಾಹರಣೆಯ ರೂಪದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಈಗ ವಿದ್ಯಾಭ್ಯಾಸದ ವಿಷಯದಲ್ಲಿ ಕೊಕಾರಿ ಕಮಿಷನಿನವರ ವರದಿ ನೋಡಿದರೆ, ನೀವು ಏನು ಪ್ರಗತಿ ಸಾಧನೆ ಮಾಡಿದ್ದೀರಿ ಎಂದು ಗೊತ್ತಾಗುತ್ತದೆ. ಅದನ್ನು ನೋಡಿದರೆ ನೀವು ಕೊಟ್ಟಿರುವುದು ತಪ್ಪು ಅಭಿಪ್ರಾಯ ಎಂದು ಮನದಟ್ಟಾಗುತ್ತದೆ. ಅದು ಹೇಗೆಂದರೆ, 65-66ನೇ ಇಸವಿಯಲ್ಲಿ ಕಾಲೇಜ್ ಶಿಕ್ಷಣ, ಮತ್ತು ಪ್ರೈಮರಿ ವಿದ್ಯಾಶಾಲೆಗಳಿಗಾಗಿ ಸರ್ಕಾರ ಕಾಲೇಜುಗಳಿಗೆ 8,78,78,565 ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಅದೇ ಪ್ರಕಾರ ಸರ್ಕಾರ ಲೋಕಲ್ ಬಾಡಿಸ್ ಹಾಗೂ ಪ್ರೈವೇಟ್ ಕಾಲೇಜ್ ಸ್ಕೂಲುಗಳಿಗೆ 7,70,0065) ಖರ್ಚು ಮಾಡಿದೆ. ಇಷ್ಟು ಹಣ ಖರ್ಚು ಮಾಡಿದರೂ ವಿದ್ಯಾಭ್ಯಾಸದಲ್ಲಿ ಎಷ್ಟು ಪ್ರಗತಿ ಸಾಧಿಸಿದೆ ಎಂದು ಆ ಕಮಿಶನಿನವರು ತೋರಿಸಿ ಕೊಟ್ಟಿದ್ದಾರೆ. ಒಂದು ಕಡೆ ಅವರು ಈ ರೀತಿ ಹೇಳುತ್ತಾರೆ.

> "Several features of the educational system promote diversified tendencies. Caste loyalties are encouraged in a number of private and other educational institutions. Rich and poor are segregated in schools. Because better type of schools are lacking, by force of circumstances, they attend free local authority schools of poor quality."

ಇಷ್ಟೊಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ನಮ್ಮ ದೇಶದಲ್ಲಿ ನ್ಯಾಶನಲ್ ಇಂಟಿಗ್ರೇಶನ್ ಬರಬಹುದು, ನಮ್ಮ ದೇಶದಲ್ಲಿರತಕ್ಕ ಎಲ್ಲಾ ಭಾಗಗಳ ಜನರಲ್ಲಿ ಏಕೀಕರಣಭಾವನೆ ಬರಬಹುದೆಂದು ನಾವಾದರೂ ತಿಳಿದುಕೊಂಡಿದ್ದೆವು. ಆದರೆ ಅದು ಸರ್ವಥಾ ಹಾಗಾಗಿಲ್ಲ. ಇವತ್ತಿನ ದಿವಸ ಆಲ್ ಇಂಡಿಯಾ ರೇಡಿಯೊದಲ್ಲಿ ದಿನ ಒಂದಕ್ಕೆ 13 ಕೋಟಿ ಖರ್ಚಾಗುತ್ತಿದೆ; ಮೈಸೂರು ಸರ್ಕಾರ ದಿವಸಕ್ಕೆ 24 ಲಕ್ಷ ರೂಪಾಯಿನಂತೆ ಹೆಚ್ಚಾಗಿ ಖರ್ಚು ಮಾಡಿದರೂ, ಇದರ ಅಭಿವೃದ್ಧಿಯಾದರೂ ಆಗುತ್ತದೆಯೇ ಎಂದು ಅನುಮಾನವಾಗುತ್ತಿದೆ. ವಿರೋಧಪಕ್ಷದವರು ಏನಾದರೂ ಹೇಳಿದರೆ, ಅದಕ್ಕೆ ಅವರು ಹಳದಿ ಕನ್ನಡಕ ಹಾಕಿಕೊಂಡು ನೋಡುವುದರಿಂದ ಅವರಿಗೆ ಎಲ್ಲಾ ಹಳದಿಯಾಗಿಯೆ ಕಾಣುತ್ತದೆ ಎಂದು ಹೇಳುತ್ತಿರುತ್ತಾರೆ. ಆದರೆ ವಾಸ್ತವಾಂಶವನ್ನು ನೋಡುವುದಾದರೆ, ಕೊಠಾರಿ ಕಮಿಶನಿನವರ ವರದಿಯೇ ಸರ್ಕಾರ ಎಷ್ಟು ಪ್ರಗತಿಯನ್ನು ಸಾಧಿಸಿದೆ ಎಂಬುದನ್ನು ಎತ್ತಿ ತೋರಿಸುತ್ತದೆ. ಇನ್ನು ಮುಂದಾದರೂ ಕೂಡ ಹೀಗೆ ಮಾಡಿದರೆ ಸಾಧನೆ ಮಾಡುವುದು ಅನುಮಾನವೆಂದು ಕಡೆ ಬಾಗುತ್ತದೆ. ಪ್ರೊಹಿಬಿಷನಿಂದಾ ಆರ್ಥಿಕವಾಗಿ ಅನೇಕರು ಮುಂದುವರೆದಿದ್ದಾರೆ. ಇದರಿಂದ ಅವರಿಗೆ, ಮುಖ್ಯವಾಗಿ, ಹರಿಜನರಿಗೆ ಅನುಕೂಲವಾಗಿರುತ್ತದೆ. ಅವರುಗಳ ಅಭಿವೃದ್ಧಿಗಾದರೂ ಪ್ರೊಹಿಬಿಷನ್ ತೆಗಿಯಕೂಡದು.

ಇನ್ನು ಇರ್ರಿಗೇಷನ್ ಬಗ್ಗೆ ಹೇಳುತ್ತೇನೆ. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ಕೊಟ್ಟಿರುವ ಮೊಬಲಗು ಬಹಳ ಕಡಿಮೆ ಇದೆ. ಮೊಟ್ಟ ಮೊದಲನೆಯದಾಗಿ ಬರೀ ಅಂಕಿ ಅಂಶಗಳನ್ನು ಮಾತ್ರ ಈ ಸಭೆಯಲ್ಲಡುವುದಕ್ಕೆ ಪ್ರಯತ್ನಪಡುತ್ತೇನೆ. 2ನೇ ಪಂಚವಾರ್ಷಿಕ ಯೋಜನೆಯಲ್ಲಿ ಮೈಸೂರು ಸೀಮೆಯಲ್ಲಿ ಇರ್ರಿಗೇಷನ್ ಪ್ರಾಜೆಕ್ಟಿಗೆ 74.55 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೂ ಕೇವಲ 14 75 ರೂಪಾಯಿಗಳ ಮಾತ್ರ ಖರ್ಚಾಗಿದೆ. ಮಿಕ್ಕಿದ್ದು ಈಗ 4ನೇ ಪಂಚವಾರ್ಷಿಕ ಯೋಜನೆಯೊಳಗೆ ಬರುತ್ತಾ ಇದೆ. 3ನೇ ಪಂಚವಾರ್ಷಿಕ ಯೋಜನೆಯಲ್ಲಿ 106.30 ಕೋಟಿ ರೂಪಾಯಿಗಳ ಅಂದಾಜು ಯೋಜನೆಗೆ ಅಗಿದ್ದರೆ ಅದರಲ್ಲಿ ಖರ್ಚಾಗಿರುವುದು ಕೇವಲ 3.75 ಕೋಟಿ ರೂಪಾಯಿಗಳು ಮಾತ್ರ ಮಿಕ್ಕ ಖರ್ಚು ಈಗ 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಬರುತ್ತಿದೆ. ಆದರೆ ನಮ್ಮಲ್ಲಿ ಏನು ಹೇಳುತ್ತಾರೆಂದರೆ, ಇನ್ನು 1972ನೇ ಇಸವಿ ಹೊತ್ತಿಗೆ ಬಹುಪಾಲು ಆಕಾರದಲ್ಲಿ ನಾವು ಸ್ವಾವಲಂಬಿಗಳಾಗುತ್ತೇವೆ ಎಂಬುದಾಗಿ ಬೇಕಾದಷ್ಟು ಸರ್ಕಾರದವರು ಆಶ್ವಾಸನೆಯನ್ನು ಕೊಡುತ್ತಿದ್ದಾರೆ. ಆಲ್ ಇಂಡಿಯಾ ಲೆವರ್‌ನಲ್ಲಿ ಇಲ್ಲಿಯವರೆವಿಗೆ ಮೂರು ಪಂಚವಾರ್ಷಿಕ ಯೋಜನೆಗಳಿಗಾಗಿ 25,000 ಕೋಟಿ ರೂ. ಖರ್ಚು ಮಾಡಿ ನಾಲ್ಕನೇ ಯೋಜನೆಯಲ್ಲಿ ದಿನ ಒಂದಕ್ಕೆ 13 ಕೋಟಿ ರೂ. ನಂತೆ ಖರ್ಚು ಮಾಡುವವರಿದ್ದೀರಿ ಮತ್ತು, ಮೈಸೂರು ಸರ್ಕಾರ ನಾಲ್ಕನೇ ಯೋಜನೆಯಲ್ಲಿ ದಿನ ಒಂದಕ್ಕೆ 24,00,000 ರೂ. ನಂತೆ ಖರ್ಚು ಮಾಡುವ ಯೋಜನೆ ಹಾಕಿಕೊಂಡಿರುತ್ತೀರಿ. ಇದನ್ನು ಖಂಡಿತವಾಗಿ ನಾವು ರಿಯಲೈಸ್ ಮಾಡುವುದಕ್ಕೆ ಸಾಧ್ಯವೇ, ಇವರು ಹೇಳತಕ್ಕದ್ದನ್ನು ನಂಬುವುದಕ್ಕೆ ಸಾಧ್ಯವೇ ಎಂದು ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಈ ಮಹಾಸಭೆ ಈ ವಿಷಯದಲ್ಲಿ ಚೆನ್ನಾಗಿ ಗಮನ ಕೊಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರದವರನ್ನು ಎನಂತೆ ಮಾಡಿಕೊಳ್ಳುತ್ತೇನೆ. ಕೃಷ್ಣರಾಜನಗರ, ಅರಕಲಗೂಡು, ಪೆರಿಯಾಪಟ್ಟಣ, ಹುಣಸೂರು—ಈ ನಾಲ್ಕು ತಾಲ್ಲೂಕುಗಳ ಜನತೆ

(ಶ್ರೀ ಎಂ. ಬಸವರಾಜು)

ಹಾರಂಗಿ ಮತ್ತು ಕಂಬದ ಕಡ ಪ್ರಾಜೆಕ್ಟ್ ಬಗ್ಗೆ ಏನೊಂದು ಭವಿಷ್ಯ ಹಾಗೂ ಆಶೋತ್ತರಗಳನ್ನು ಇಟ್ಟುಕೊಂಡಿದ್ದರೋ, ಮತ್ತು ಯಾವ ಒಂದು ಹಸನಾದ ಮತ್ತು ಸುಂದರವಾದ ಬಾಳನ್ನು ಬಾಳ ಬೇಕೆಂಬ ಆಕಾಂಕ್ಷೆಯನ್ನು ಹೊಂದಿದ್ದರೋ ಅದೆಲ್ಲವನ್ನು ಬಲಿಕೊಟ್ಟಂತಾಗಿದೆ. ಅಲ್ಲಿನ ಕನ್ನಡ ಜನತೆ ಇಂದು ಅದಕ್ಕಾಗಿ ಒಂದು ಹೋರಾಟ ನಡೆಸುತ್ತಿದ್ದಾರೆ. ಹಾರಂಗಿ ಮತ್ತು ಕಂಬದ ಕಡ ಯೋಜನೆಗಳ ಬಗ್ಗೆ ಇವರು ಬಹಳ ಕಟ್ಟುನಿಟ್ಟಾಗಿ ಅಲಕ್ಷ್ಯದಿಂದ ನೋಡುತ್ತಿದ್ದಾರೆ. ಕೇವಲ ಈ ಸಭೆಯ ಮಾನ್ಯ ಸದಸ್ಯರೊಬ್ಬರಾದ ಶ್ರೀ ಚನ್ನಬಸಪ್ಪನವರನ್ನು ವಿರೋಧಿಸುವುದಕ್ಕಾಗಿ ಈ ನಾಲ್ಕು ತಾಲ್ಲೂಕುಗಳ ಜನತೆಯನ್ನು ಇವರು ಈಗ ಬಲಿ ಕೊಡುತ್ತಿದ್ದಾರೆ. ಕಳೆದ ಐದು ವರ್ಷಗಳಿಂದ ಇಲ್ಲಿ ಏನು ನಡೆಯುತ್ತಿದೆ ಎಂದರೆ, ಈ ಪ್ರಾಂತಗಳಿಗೆ ನೀರು ಕೊಡುತ್ತೇವೆಂದು ಹೇಳುತ್ತಲೇ ಇದ್ದಾರೆ. ರಾಜ್ಯದ ಎಲ್ಲಾ ತಾಲ್ಲೂಕುಗಳಿಗಿಂತ ಕೃಷ್ಣರಾಜನಗರದ ತಾಲ್ಲೂಕಿನಲ್ಲಿ ಬಹಳ ಒಳ್ಳೆಯ ಇರಿಗೇಷನ್ ಅವಕಾಶ ಇದೆ. ಈ ತಾಲ್ಲೂಕು ಸಂಪದಭಿವೃದ್ಧಿಯಿಂದ ಕೂಡಿರತಕ್ಕದ್ದು. ಇಲ್ಲಿ ಸುಮಾರು 67 ಸಾವಿರ ಎಕರೆಯಷ್ಟು ನೀರಾವರಿಯಾಗುವುದಕ್ಕೆ ಬದಲು ಕೇವಲ 37 ಸಾವಿರ ಎಕರೆಯಷ್ಟು ನೀರಾವರಿಯಾಗಿದೆ. ನಮ್ಮ ಮಂತ್ರಿಗಳು ಮೈಸೂರಿನ ಡೆವೆಲಪ್‌ಮೆಂಟ್ ಕಮಿಷನರಿಗೆ ಈ ಕೃಷ್ಣರಾಜನಗರದ ತಾಲ್ಲೂಕಿನ ಬಗ್ಗೆ ಕ್ಷಾಮ ನಿವಾರಣೆಗಾಗಿ ತಕ್ಷ ಪರಿಹಾರ ಕೊಡಬೇಕೆಂದು ಹೇಳಿದ್ದರೂ ಅಲ್ಲಿ ಅದು ಸಾಕಷ್ಟು ಪ್ರಯೋಜನವಾಗಿಲ್ಲ. ಹಾರಂಗಿ ಪ್ರಾಜೆಕ್ಟ್ ಬಗ್ಗೆ ನಮ್ಮ ಮಂತ್ರಿಗಳು ಏನೊಂದು ಘೋರಣೆಯನ್ನು ಹಾಗೂ ನಿಲುವನ್ನು ಇಟ್ಟುಕೊಂಡಿದ್ದರೋ ಅದನ್ನು ನಿಲ್ಲಿಸಿ ಪ್ರಗತಿಪರವಾಗಿ ಮಾಡುತ್ತಾರೆಂದು ನಾನು ನಂಬಿದ್ದೇನೆ. ಇಷ್ಟೊಂದು ಕೋಟಿರೂಪಾಯಿಗಳ ಖರ್ಚಿನಲ್ಲಿ ಸುಮಾರು ಒಂದೂ ಮುಕ್ಕಾಲು ಲಕ್ಷ ಎಕರೆಗೆ ನೀರಾವರಿಯಾಗುತ್ತದೆಂದು ಒಂದು ನಂಬಿಕೆ ನಮಗೆ ಕಂಡು ಬಂದಿದೆ. ಮೂರು ನಾಲ್ಕು ತಾಲ್ಲೂಕುಗಳಿಗೆ ಅನುಕೂಲವಾಗತಕ್ಕ ಈ ಒಂದು ಪ್ರಾಜೆಕ್ಟಿಗೆ ಕೇವಲ 4 ಲಕ್ಷ ರೂಪಾಯಿಗಳನ್ನು ಮಾತ್ರ ಇವರು ಈಗ ಮೀಸಲಾಗಿಟ್ಟಿದ್ದಾರೆ. ಜುನಾವಣೆ ಪ್ರಚಾರಕ್ಕೆ ಕಳೆದ ಸಲ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ರೋಕೋಪಯೋಗಿ ಶಾಖೆಯ ಸಚಿವರು ನಮ್ಮ ಕ್ಷೇತ್ರಕ್ಕೆ ಬಂದಾಗ ಹಾರಂಗಿ ಪ್ರಾಜೆಕ್ಟ್ ವಿಷಯದಲ್ಲಿ ತುಂಬಾ ಗಮನ ಕೊಡುತ್ತೇವೆಂದು ಹೇಳಿ ಅಲ್ಲಿನ ಆಜ್ಞಾಪತ್ರದಲ್ಲಿ ಬರತಕ್ಕ ರೈತರಿಗೆಲ್ಲರಿಗೂ ಹೆಚ್ಚಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿದರು. ಆದರೆ ಆ ಬಾಬಿಗೆ ಏನು ದುಡ್ಡನ್ನು ಕೊಟ್ಟಿದ್ದಾರೆಂಬುದನ್ನು ನೋಡಿ ಅಲ್ಲಿನ ಜನ ತುಂಬ ನಿರಾಶರಾಗುತ್ತಿದ್ದಾರೆ. ಕೇವಲ ನಾಲ್ಕು ಲಕ್ಷ ರೂಪಾಯಿಗಳಲ್ಲಿ ಏನು ಕೆಲಸವನ್ನು ಮಾಡುವುದಕ್ಕೆ ಸಾಧ್ಯ ? ಈ 4 ಲಕ್ಷ ರೂಪಾಯಿಗಳು ಇವರ ಎಸ್ಟಾಬ್ಲಿಷ್‌ಮೆಂಟಿಗೆ ಆಗುತ್ತದೆಂದು ಕಾಣುತ್ತದೆ. ಈ ಕೆಲಸಕಾರ್ಯಗಳಿಗೆ ಏನೇನೂ ಸಾಲದು. ಇದು ಮಾಲತಾಯಿ ಘೋರಣೆಯಂತಿದೆ. ಕರ್ನಾಟಕವಾಗಬೇಕು ಎಂಬುದಂಗಿ ಹೋರಾಟ ಮಾಡುವುದರಲ್ಲಿ ನಾವು ಇದೇವೆ. ನಾನು ಅಲ್ಲಿಯೂ ಸೇವೆ ಮಾಡಿದ್ದೇನೆ. ಇದೇ ವಿಷಯವಾಗಿ ಇಡೀ ತಾಲ್ಲೂಕಿನಲ್ಲಿ ಎರಡು ಕರ್ನಾಟಕಗಳಾಗಬೇಕು ಎಂದು ಹೇಳುವುದಕ್ಕೆ ನಾನು ವಿರೋಧಪಟ್ಟವನಾಗಿದ್ದು ಕರ್ನಾಟಕವಾಗಬೇಕು ಎಂದು ಹೇಳುವವನಾಗಿದ್ದೇನೆ. ನಮಗೆ ಆ ಕರ್ನಾಟಕ ಬೇರೆ, ಈ ಕರ್ನಾಟಕ ಬೇರೆ ಎಂಬುದಾಗಿ ಹೇಳುವ ಮನಸ್ಸು ಇಲ್ಲದಿದ್ದರೂ ನಮ್ಮ ಅನುಕೂಲ ಹಾರಂಗಿ ಪ್ರಾಜೆಕ್ಟ್ ಬಗ್ಗೆ ಏನಿದೆಯೋ ಅದನ್ನು ಅಡಳಿತ ಪಕ್ಷ ಮಾಡುತ್ತಿಲ್ಲವೆಂದು ನಾನು ವಿಷಾದಪಡಬೇಕಾಗಿದೆ. ಆ ರೀತಿ ವಿಷಾದಪಡುವವನು ನಾನೊಬ್ಬನಲ್ಲ, ಮೂರು ನಾಲ್ಕು ತಾಲ್ಲೂಕುಗಳ ಲಕ್ಷಾಂತರ ಜನತೆ ಸಂತಾಪ ಪಟ್ಟಿದ್ದಾರೆ. ಈ ದೇಶಕ್ಕೇ ಕೆಟ್ಟ ಉಸಿರನ್ನು ಬಿಡುತ್ತಿದ್ದಾರೆ.

ಇನ್ನು ಪ್ರೊಹಿಬಿಷನ್ ವಿಷಯವಾಗಿ ನಾನು ಎರಡು ಅಭಿಪ್ರಾಯಗಳನ್ನು ಹೇಳಬೆಕಾಗಿದೆ. ಈ ಪ್ರೊಹಿಬಿಷನ್ನನ್ನು ಜಾರಿಗೆ ತರಬೇಕಾದರೆ ಮಹಾತ್ಮ ಗಾಂಧಿಯವರಲ್ಲಿ ಏನೊಂದು ಅಶೋತ್ತರ ವಿತ್ತೋ ಅದನ್ನು ನೆರವೇರಿಸುವುದಕ್ಕಾಗಿ ಅವರ ನೇತೃತ್ವದಲ್ಲಿ ಈ ಪ್ರೊಹಿಬಿಷನ್ನನ್ನು ತಂದಿದ್ದು ಆಯಿತು. ಆದರೆ ಅದನ್ನು ತಂದದ್ದರಿಂದ ಸಾಧ್ಯವಾದುದೇನು ? ಮತ್ತು ಪ್ರೊಹಿಬಿಷನ್ ಕೆಗೆದರೆ ಆಗತಕ್ಕ ಅನುಕೂಲಗಳೇನೆಂಬುದನ್ನು ಯೋಚನೆ ಮಾಡಬೇಕು. ಇಂಡಿಯಾ ದೇಶದಲ್ಲಿ ಹರಿಜನ ಮತ್ತು ಗಿರಿಜನರು ಸುಮಾರು 10 ಕೋಟಿ ಇರಬಹುದು. ಪಾನ ನಿರೋಧವನ್ನು ಜಾರಿಗೆ ತರಬೇಕು ಎಂದು ಗಾಂಧೀಜಿಯವರು ಹೇಳಿದ್ದು ಒಂದು ನೀತಿ. ಅದನ್ನು ಕಾರ್ಯಗತ ಮಾಡುತ್ತಿರುವ ರೀತಿಯಿಂದಾಗಿ ಅನೇಕರಿಗೆ ಅನುಕೂಲವಾಗುವುದಕ್ಕೆ ಬದಲು ಪ್ರತಿಕೂಲವೇ ಜಾಸ್ತಿಯಾಗಿ ಆಗುತ್ತಿದೆ. ಹರಿಜನ ಗಿರಿಜನರ ಅಭಿವೃದ್ಧಿಗೋಸ್ಕರವಾಗಿ ಸರ್ಕಾರದವರು ಎಷ್ಟೋ ಹಣವನ್ನು ಖರ್ಚುಮಾಡುತ್ತಿದ್ದಾರೆ. ಪುಃ ಹರಿಜನ ಉದ್ಧಾರಕ್ಕಾಗಿಯೇ ಇನ್ನೂ ಹಣವನ್ನು ಹೆಚ್ಚಿಗೆ ಖರ್ಚುಮಾಡುತ್ತೇವೆಂದು

ಹೇಳಿರುವುದನ್ನು ನೋಡಿದರೆ ಇದರಿಂದ ಹರಿಜನ ಗಿರಿಜನರಿಗೆ ವಿಶೇಷವಾಗಿ ಹೇಗೆ ಅನುಕೂಲವಾಗುತ್ತದೆ! ಇವರು ಪ್ರೊಹಿಬಿಷನ್ ನೀತಿ ಸರ್ವನಾಶ ಹಂಡೂಗಳನ್ನು ಹಾಗೂ ಹರಿಜನ ಗಿರಿಜನರನ್ನು ಒಬ್ಬರಮೇಲೊಬ್ಬರನ್ನು ಎತ್ತಿಕಟ್ಟಿವುದೇ ಆಗಿರುತ್ತದೆ. ಇವರು ಸರಿಯಾಗಿ ಜಾರಿ ಮಾಡಲಿ. ಅದರಿಂದ ಇಂಥ ಸಮಾಜದಲ್ಲಿ ನೈತಿಕ ಅಧಃಪತನವಾಗಿದೆ. ನಮ್ಮ ದೇಶದಲ್ಲಿ ಅದರಿಂದಲೇ ಒಂದು ಸಾಮಾಜಿಕ ಹಾಗೂ ನೈತಿಕ ಬೆಳವಣಿಗೆ ಅಧಃಪತನಕ್ಕೆ ಕಾರಣವಾಗುತ್ತಿದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಸರ್ಕಾರದವರು ಇದುವರೆಗೆ ಅಬ್ಕಾರಿ ಯಾವ ಒಂದು ನಿರ್ದಿಷ್ಟವಾದ ಕ್ರಮವನ್ನೂ ತೆಗೆದುಕೊಂಡಿಲ್ಲ. ಆದ್ದರಿಂದ ಅವರು ಸಂಪೂರ್ಣ ವಿಶ್ವಾಸ ಅಥವಾ ನಂಬಿಕೆಯಿಂದ ಕೆಲಸ ಮಾಡಬೇಕು. ಯಾವ ಕೆಲಸವನ್ನು ಮಾಡಿದರೂ ಅದನ್ನು ಅರ್ಧಮರ್ಧ ಮಾಡುವುದು ಹಾನಿಕರವಾಗುತ್ತದೆ.

ಇನ್ನು ರ್ಯಾಂಡ್ ರೆವಿನ್ಯೂವನ್ನು ತೆಗೆದುಹಾಕುತ್ತೇವೆಂದು ಹೇಳುತ್ತಿದ್ದಾರೆ. ಇದೂ ಸಹ ಅದೇ ರೀತಿಯಲ್ಲಿ ಆಗಿದೆ. ಆಲ್ ಇಂಡಿಯಾ ಮಟ್ಟದಲ್ಲಿ ಕೆಲವು ಪೇಪರ್ ಎಕ್ಸಿಬಿಗಳನ್ನು ರಾಷ್ಟ್ರೀಕರಣ ಮಾಡಬೇಕಾಗಿದೆ. ಈ ಸರ್ಕಾರ ಈ ಬಗ್ಗೆ ನಿರ್ದಿಷ್ಟವಾದ ನಿಲುವನ್ನು ತಾಳಿ ಜನಗಳಿಗೆ ಅನುಮಾನವನ್ನು ಬಿಡಿಸಬೇಕಾಗಿದೆ. ಇದರಿಂದ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಎಂದು ಏನು ಹೇಳುತ್ತಿದ್ದಾರೋ ಅದು ನಿಜವಾಗಿ ನಮಗೆ ಸೂಟ್ ಆಗುವುದಿಲ್ಲವೋ ಏನೋ. ಸಮಾಜವಾದ ನೀತಿ ಇವರಲ್ಲಿ ಸಲ್ಲುವೋ ಏನೋ ಗೊತ್ತಿಲ್ಲ. ಅವಿವ್ಯಾಪಾರಿಗೆ ಪ್ರಾಧಾನವಾದ ನಮ್ಮ ದೇಶದಲ್ಲಿ ಇಂತಹ ತಾತ್ವಿಕ ವಿಷಯಗಳಲ್ಲಿ ಅನುಮಾನ ಪ್ರವೃತ್ತಿಯನ್ನು ಬಿಟ್ಟುವುದು ಸರ್ಕಾರಕ್ಕೆ ಹಾಗೂ ದೇಶಕ್ಕೆ ಒಂದು ದೊಡ್ಡ ಹಾನಿಯಾಗುತ್ತದೆ.

ಕೊನೆಯವಾಗಿ ನನಗೆ ಇಲ್ಲಿ ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರನ್ನು ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಕೊನೆಯಲ್ಲಿ ಈ ಅಪ್ರೋಪ್ರಿಯೇಷನ್ ಮಸೂದೆಯ ಮೇಲೆ ಮಾತನಾಡುತ್ತಾ ಮಾನ್ಯ ಸದಸ್ಯರು ಏನೇನು ಸೂಚನೆಗಳನ್ನು ಮಾಡಿದ್ದೀರೋ ಅವುಗಳನ್ನೆಲ್ಲಾ ಸರ್ಕಾರದವರು ಸೂಕ್ಷ್ಮಮನಸ್ಸನ್ನು ಕೊಟ್ಟು ಪರಿಶೀಲಿಸುತ್ತಾರೆಂದು ನಾನು ಹೇಳುತ್ತೇನೆ. ಕೆಲವು ಸದಸ್ಯರು ಈ ಮಸೂದೆಯ ಮೇಲೆ ಮಾತನಾಡುತ್ತಾ ರ್ಯಾಂಡ್ ರೆವಿನ್ಯೂ ಸಂಪೂರ್ಣವಾಗಿ ತೆಗೆದುಬಿಡಬೇಕು, ಪಾರ್ ರೇಟ್ ಮತ್ತು ಬೆಟರ್‌ಮೆಂಟ್ ಲೆವಿ ಇವುಗಳನ್ನು ಕಡಿಮೆಮಾಡಬೇಕು ಮತ್ತು ಹೊಸ ಹೊಸ ಅನೇಕ ಕೆಲಸಗಳನ್ನು ವ್ಯವಸಾಯ ಕ್ಷೇತ್ರದಲ್ಲಿ ಮತ್ತು ಔದ್ಯೋಗಿಕ ಕ್ಷೇತ್ರದಲ್ಲಿ ತಪ್ಪದೆ ಮಾಡಬೇಕೆಂದು ವಾದ ಮಾಡಿದರು.

ಈ ಕೆಲಸವನ್ನು ಸಾಕ್ಷಾತ್ ಕುಬೇರನೇ ಬಂದು ಮಾಡಿದರೂ ಸಾಧ್ಯವಾಗುವುದಿಲ್ಲ. ಬಡ್ಜೆಟ್ ಎಂದರೆ ಏನು, ಆದಾಯ ಮತ್ತು ವೆಚ್ಚ ಇವುಗಳ ಪಟ್ಟಿ; ನಮ್ಮ ವೆಚ್ಚ ಆದಾಯ ಎಷ್ಟು ಇದೆಯೋ ಅದರಮೇರೆ ಅವಲಂಬಿಸಬೇಕಾಗುತ್ತದೆ. ಆದಾಯಕ್ಕಿಂತ ಹೆಚ್ಚು ವೆಚ್ಚ ಮಾಡತಾ ಹೋದರೆ ಹಣಕಾಸಿನ ಪರಿಸ್ಥಿತಿ ರಾಜ್ಯದ್ದು ಅಷ್ಟೇ ಅಲ್ಲ, ಇಡೀದೇಶದ್ದೂ ಕೂಡ ಮತ್ತಷ್ಟು ಕೆಡುತ್ತದೆ. ಇಂದು ನಮ್ಮ ದೇಶದಲ್ಲಿ ಹಣದ ಉಬ್ಬರ ಇನ್‌ಫ್ಲೇಷನ್ ಜಾಸ್ತಿಯಾಗಿದೆ. ಮತ್ತು ಇದರ ಪರಿಣಾಮವಾಗಿ ಬೆಲೆಯ ಹತೋಟಿ ಮೀರಿ ಏರುತ್ತಾ ಇರುವುದಕ್ಕೆ ಮುಖ್ಯ ಕಾರಣ ಡಿಫಿಸಿಟ್ ಫೈನಾನ್ಸಿಂಗ್ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಡಿಫಿಸಿಟ್ ಫೈನಾನ್ಸಿಂದ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದವರು ಹಣದ ಪೂರೈಕೆಗೆ ರಿಜರ್ವ್ ಬ್ಯಾಂಕಿನವರನ್ನು ಆಶ್ರಯಿಸಿ ಹಣದ ಉತ್ಪಾದನೆ ಹೆಚ್ಚಾಗಿದೆ. ಹಣದ ಸರ್ಕ್ಯುಲೇಷನ್ ಹೆಚ್ಚಾಗಿದೆ. ಅದರಿಂದ ಪದಾರ್ಥಗಳ ಬೆಲೆ ಹೆಚ್ಚಾಗುತ್ತಿದೆ. ಹಣದ ಬೆಲೆ ಕಡಿಮೆಯಾಗುತ್ತಿದೆ. ಇದು ಅರ್ಥ ಶಾಸ್ತ್ರದ ಸಾಮಾನ್ಯವಾದ ಒಂದು ತತ್ವ. ಇಂದು ನಮ್ಮ ದೇಶದಲ್ಲಿ ಹಣದ ಉಬ್ಬರಕ್ಕೆ ಮುಖ್ಯ ಕಾರಣ ಕಳೆದ ಅನೇಕ ವರ್ಷಗಳಿಂದ ರಾಜ್ಯ ಸರ್ಕಾರದವರು ಮತ್ತು ಕೇಂದ್ರ ಸರ್ಕಾರದವರೂ ಕೂಡ ಡಿಫಿಸಿಟ್ ಫೈನಾನ್ಸಿಂಗಿಗೆ ಶರಣಾಗತ ಆದದ್ದು. ನಾನು ಕಳೆದ ಬಡ್ಜೆಟ್‌ನಲ್ಲಿ ಹೇಳಿದ್ದೇನೆ, ಈ ಸಲ ಕೂಡ ಹೇಳಿದ್ದೇನೆ, ಇನ್ನು ಮುಂದೆ ಈ ದೇಶದಲ್ಲಿ ಡಿಫಿಸಿಟ್ ಫೈನಾನ್ಸಿಂಗಿಗೆ ಮೊರೆ ಹೋದರೆ ದೇಶದ ಹಣಕಾಸಿನ ಪರಿಸ್ಥಿತಿಯನ್ನು ಕಂಟ್ರೋಲ್‌ನಲ್ಲಿಡಲು ತಕ್ಕದ್ದು ಸರ್ವಥಾ ಸಾಧ್ಯವಾಗುವುದಿಲ್ಲ ಎಂದು. ಇದು ಕೇವಲ ಕೇಂದ್ರ ಸರ್ಕಾರದವರ ಜವಾಬ್ದಾರಿ ಎಂದು ಹೇಳಿ ಕುಳಿತುಕೊಂಡರೆ ಆಗುವುದಿಲ್ಲ. ಕೇಂದ್ರ ಸರ್ಕಾರದವರು ಜವಾಬ್ದಾರಿ ಎಷ್ಟೋ, ಅಷ್ಟೇ ಜವಾಬ್ದಾರಿ ರಾಜ್ಯ ಸರ್ಕಾರಕ್ಕೂ ಕೂಡ ಇದೆ. ಈಗ ಕೇಂದ್ರ ಸರ್ಕಾರದವರು ಡಿಫಿಸಿಟ್ ಫೈನಾನ್ಸನ್ನು ಕಡಿಮೆ ಮಾಡಲು ಯೋಚನೆ ಮಾಡುತ್ತಿದ್ದಾರೆ. ಅದನ್ನು ಯಾವರೀತಿ ನಿಲ್ಲಿಸಬೇಕು ಎಂಬುದಕ್ಕೆ ಮೊನ್ನೆತಾನೆ ಕೇಂದ್ರ ಸರ್ಕಾರದ ಅರ್ಥ ಸಚಿವರು ಮಾಡಿದಂತಹ ಭಾಷಣದಿಂದ ಅದು ವ್ಯಕ್ತವಾಗುತ್ತದೆ. ಮತ್ತು ಅದೇರೀತಿಯಲ್ಲಿ ರಾಜ್ಯ ಸರ್ಕಾರವು ರಿಜರ್ವ್ ಬ್ಯಾಂಕಿನಿಂದ ಓವರ್ ಡ್ರಾಫ್ಟ್ ಮುಖಾಂತರ ಏನು ಹಣವನ್ನು ಪಡೆಯುವ ಒಂದು ಅಭ್ಯಾಸ ರಾಜ್ಯ ಸರ್ಕಾರದವರಿಗೆ

(ಶ್ರೀ ರಾಮಕೃಷ್ಣ ಹೆಗಡೆ)

ಆಗಿತ್ತೋ ಆ ಅಭ್ಯಾಸದ ಮೇಲೆ ಇನ್ನೂ ಹೆಚ್ಚಿನ ಹತೋಟಿಯನ್ನು ಕೇಂದ್ರ ಸರ್ಕಾರದವರು ಹಾಕಬೇಕೆಂದು ನಿರ್ಧಾರ ಮಾಡಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತೇನೆ. ಇದರಿಂದ ನಮಗೆ ತಾತ್ಕಾಲಿಕವಾಗಿ ತೊಂದರೆ ಆಗಿಯೇ ಆಗುತ್ತದೆ. ರಿಜರ್ವ್ ಬ್ಯಾಂಕಿನವರು ನಮಗೆ ಓವರ್‌ಡ್ರಾಫ್ಟಿನ ಅನುಕೂಲತೆಯನ್ನು ಮಾಡಿಕೊಡುವಿದ್ದರೆ ನಮಗೆ ತಾತ್ಕಾಲಿಕವಾಗಿ ಅನೇಕ ತೊಂದರೆಗಳು ಆಗುತ್ತವೆ. ಆವುಗಳನ್ನು ಎದುರಿಸುವುದಕ್ಕೆ ನಾವು ಸಿದ್ಧ ಆಗಬೇಕು, ಇದನ್ನು ದೂರದೃಷ್ಟಿಯಿಂದ ವಿಚಾರ ಮಾಡಿದರೆ ಇದರಿಂದ ನಮ್ಮ ರಾಜ್ಯಕ್ಕೆ, ನಮ್ಮ ದೇಶಕ್ಕೆ ಕಲ್ಯಾಣವಾಗುತ್ತದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಬಜೆಟ್ಟು ಉಳಿತಾಯದ ಬಜೆಟ್ಟು. ಆದರೆ ಈ ಉಳಿತಾಯ ಮೂರ ವರ್ಷಗಳ ವಿಚಾರಗಳಮೇಲೆ ಅವಲಂಬಿಸಿರುತ್ತದೆ ಎಂದು ನಾನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಬಯಸುತ್ತೇನೆ. ಇದರಲ್ಲಿ ಮೊದಲನೆಯದು, ನಾವು ಯಾವ ಯಾವ ಬಾಬಿಗಳಿಂದ ಎಷ್ಟು ಉತ್ಪನ್ನ ಬರುತ್ತದೆ ಎಂದು ಹೇಳುತ್ತೇವೆಯೋ, ಎಷ್ಟು ಉತ್ಪನ್ನ ಬರುತ್ತದೆ ಎಂದು ನಿರೀಕ್ಷಣೆ ಮಾಡಿದ್ದೇವೆಯೋ ಅಷ್ಟು ಉತ್ಪನ್ನ ಆ ಬಾಬುಗಳಿಂದ ಬರಬೇಕು, ಬಹುಶಃ ಆದು ಬಂದೇ ಬರುತ್ತದೆ ಎನ್ನುವ ವಿಶ್ವಾಸ ನಮ್ಮಲ್ಲಿದೆ.

ಇನ್ನು ಎರಡನೆಯದು ಬಜೆಟ್ಟಿನಲ್ಲಿ ಸೇರಿಸದೇ ಇದ್ದಂತಹ ಯಾವುದೇ ಹೊಸ ಕೆಲಸಗಳನ್ನು ಸರ್ಕಾರ ಕೈಗೊಳ್ಳಕೂಡದು. ಕಳೆದ ಅನೇಕ ವರ್ಷಗಳಿಂದ ಒಂದು ರೋಗ ನಮ್ಮ ಹಣಕಾಸಿನ ವ್ಯವಸ್ಥೆಯಲ್ಲಿ ಬಂದಿದೆ. ಆದನ್ನು ನಾನು ಒಪ್ಪಿಕೊಳ್ಳುತ್ತೇನೆ. ರೋಗ ಎಂದರೆ, ಬಜೆಟ್ಟಿನಲ್ಲಿ ಸೇರಿಸದೇ ಇದ್ದಂತಹ ಅನೇಕ ಕೆಲಸಗಳನ್ನು ಜನತೆಯ ಒತ್ತಾಯಕ್ಕಾಗಿ ಸದಸ್ಯರ ಒತ್ತಾಯಕ್ಕಾಗಿ ಅಥವಾ ಇನ್ನು ಯಾವುದೋ ಒಂದು ಒತ್ತಾಯಕ್ಕೆ ಗಂಟುಬಿದ್ದು ಹೊಸ ಕೆಲಸಗಳನ್ನು ತೆಗೆದುಕೊಳ್ಳುತಕ್ಕಂಥ ಪರಿಸ್ಥಿತಿ ಸರ್ಕಾರಕ್ಕೆ ಒದಗುವುದು. ಆದು ತಪ್ಪು. ಆ ತಪ್ಪನ್ನು ನಾನು ಯಾರಮೇಲೂ ಹೊರಿಸುವುದಕ್ಕೆ ಹೋಗುವುದಿಲ್ಲ. ವಸ್ತುಸ್ಥಿತಿಯನ್ನು ನಾನು ಈ ಮಾನ್ಯ ಸಭೆಗೆ ಮಾನ್ಯ ಸದಸ್ಯರ ಮುಂದೆ ಇಡಲಿಕ್ಕೆ ಬಯಸುತ್ತೇನೆ. ಆದ್ದರಿಂದ ಬಜೆಟ್ಟಿನಲ್ಲಿ ಯಾವ ಒಂದು ವ್ಯವಸ್ಥೆಯನ್ನು ಮಾಡುತ್ತೇವೆಯೋ, ಯಾವ ವ್ಯವಸ್ಥೆ ಆಗಬೇಕೆಂದು ಬಯಸುತ್ತೇವೆಯೋ ಆ ವ್ಯವಸ್ಥೆಯಲ್ಲಿ ಅನೇಕ ರೀತಿಯ ತೊಂದರೆಗಳು ಉಂಟಾಗುತ್ತವೆ. ಆದ್ದರಿಂದ ಮಾನ್ಯ ಸದಸ್ಯರ ಸಹಕಾರವನ್ನು ಈ ವಿಚಾರದಲ್ಲಿ ಕೋರುತ್ತೇವೆ.

ಇನ್ನು ಮುಖ್ಯ ವಿಷಯವನ್ನು ಪ್ರಸ್ತಾಪಿಸುವುದು ಏನೆಂದರೆ, ಚಿಕ್ಕ ನೀರಾವರಿ ಯೋಜನೆ ಮತ್ತು ಕುಡಿಯುವ ನೀರಿನ ಯೋಜನೆ, ಈ ಎರಡು ಯೋಜನೆಗಳನ್ನು ವಿಪರೀತವಾಗಿ ಬೆಳೆಸಿದ್ದೇವೆ. ಅನೇಕ ಕೆಲಸಗಳನ್ನು ಕೈಗೊಂಡಿದ್ದೇವೆ. ನಾನು ಬಜೆಟ್ಟಿನ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ, ಬರುವ ಒಂದೆರಡು ವರ್ಷಗಳು ಎಂದರೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಕೊನೆಯವರೆಗೆ ನಮ್ಮ ಪ್ರಯತ್ನ ಏನಾಗಬೇಕು ಎಂದರೆ, ಕೈಗೊಂಡ ಯೋಜನೆಗಳನ್ನು ಮೊದಲು ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕು. 108 ಯೋಜನೆಗಳನ್ನು ತೆಗೆದುಕೊಂಡು ಪ್ರತಿ ವರ್ಷವೂ ಹೊಸ ಹೊಸ ಯೋಜನೆಗಳನ್ನು ತೆಗೆದುಕೊಂಡರೆ ಯಾವುದನ್ನೂ ಮುಗಿಸದಹಾಗಾಗುತ್ತದೆ. ಎಲ್ಲಾ ಅರ್ಧಮರ್ಧ ಬಿಟ್ಟಿರುತ್ತವೆ. ಇದರಿಂದ ಆ ಕೆಲಸಗಳಿಗೆ ನಾವು ಎಷ್ಟು ಹಣವನ್ನು ಒದಗಿಸಿ ಖರ್ಚು ಮಾಡಿರುತ್ತೇವೆಯೋ ಆ ಹಣಕ್ಕೆ ಪ್ರತಿಫಲ ಸಿಕ್ಕುವುದಿಲ್ಲ. ಜನತೆಗೂ ತೃಪ್ತಿ ಆಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಹೊಸ ಕೆಲಸಗಳನ್ನು ತೆಗೆದುಕೊಳ್ಳುತಕ್ಕ ಅನಿವಾರ್ಯ ಪ್ರಸಂಗಗಳು ಬರುತ್ತವೆ. ಈಗ ಎರಡು ವರ್ಷಗಳಿಂದ ನಮ್ಮದೇಶದಲ್ಲಿ ಮಳೆ ಬಾರದೆ ಕ್ಷಾಮ ಪರಿಸ್ಥಿತಿ ಗಂಟಾಯಿತು. ಆಗ ಕೆಲವು ಹೊಸ ಕೆಲಸಗಳನ್ನು ತೆಗೆದುಕೊಳ್ಳಬೇಕಾಯಿತು. ಇಂಥಾ ಅನಿವಾರ್ಯ ಪ್ರಸಂಗಗಳು ಬಂದೇ ಬರುತ್ತವೆ. ಸಾಮಾನ್ಯವಾದ ಪರಿಸ್ಥಿತಿಯಲ್ಲಿ ಹೊಸ ಕೆಲಸಗಳು ಆಗಬೇಕು ಎಂದು ಹೇಳತಕ್ಕಂಥ ಉದ್ದೇಶವನ್ನು ಇಟ್ಟುಕೊಂಡರೆ ಬಜೆಟ್ಟಿನಲ್ಲಿ ದುಷ್ಪರಿಣಾಮಗಳು ಆಗೇ ಆಗುತ್ತವೆ.

ಇನ್ನು ಮೂರನೆಯ ಕಾರಣ ನಮಗೆ ಉಳಿತಾಯ ಇರಲಿಕ್ಕೆ, ಎಂದರೆ, ನಾವು ಕಳೆದ ಸಾರಿ ಈ ಚಾಲು ವರ್ಷದಲ್ಲಿ ಸರ್ಕಾರಿ ನೌಕರರುಗಳಿಗೆ ಎರಡು ಸಾರಿ ತುಟ್ಟಿ ಭತ್ಯವನ್ನು ಏರಿಸಿದ್ದೇವೆ. ಅದಕ್ಕೆ ಎಷ್ಟು ಖರ್ಚು ಬರುತ್ತದೆಯೋ ಅದನ್ನು ಇದರಲ್ಲಿ ಹಿಡಿದಿದ್ದೇವೆ. ಹೆಚ್ಚಿನ ತುಟ್ಟಿಭತ್ಯವನ್ನು ಇದರಲ್ಲಿ ಸೇರಿಸಿಲ್ಲ. ಮೊನ್ನೆ ಕೇಂದ್ರದ ಅರ್ಥ ಸಚಿವರು ಒಂದು ಭಾಷಣ ಹೇಳಿದ್ದಾರೆ. ಅದನ್ನು ಕೇಳಿ ನನಗೆ ಆಶ್ಚರ್ಯವಾಯಿತು. ಆದರ ಬಗ್ಗೆ ನನ್ನ ಪ್ರತಿಕ್ರಿಯೆಯನ್ನು ಸ್ಪಷ್ಟವಾದರೇಬೇಕು. ಆದೇನೆಂದರೆ, ಬೆಲೆಯ ಏರುಪೇರಿಕೆಯಿಂದ, ಆದರ ಪರಿಣಾಮದಿಂದ ಸರ್ಕಾರಿ ನೌಕರರಿಗೆ ಹೆಚ್ಚಿನ ತುಟ್ಟಿಭತ್ಯವನ್ನು ಕೊಡತಕ್ಕ ನಿರ್ಧಾರವನ್ನು ರಾಜ್ಯ ಸರ್ಕಾರದವರು ಮಾಡಿದ್ದಾರೆ. ಆ ನಿರ್ಣಯಕ್ಕೆ

ಸಂಪೂರ್ಣವಾಗಿ ಜವಾಬ್ದಾರರು ರಾಜ್ಯ ಸರ್ಕಾರದವರೇ, ಮತ್ತು ಅದರ ಹಣಕಾಸಿನ ಹೆಚ್ಚಿನ ಖರ್ಚನ್ನು ಹೊರುವ ಜವಾಬ್ದಾರಿಯು ರಾಜ್ಯ ಸರ್ಕಾರಕ್ಕೆ ಸೇರಿದ್ದು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಈ ವಿಚಾರ ಹೊಸವಿಚಾರವಲ್ಲ. ಕಳೆದ ಅನೇಕ ವರ್ಷಗಳಿಂದ ಕೇಂದ್ರ ಸರ್ಕಾರಕ್ಕೂ ಮತ್ತು ರಾಜ್ಯ ಸರ್ಕಾರಕ್ಕೂ ಇದರ ಬಗ್ಗೆ ವಾದ ವಿವಾದ ಆಗುತ್ತಾ ಬಂದಿದೆ. ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದವರ ಅಭಿಪ್ರಾಯವನ್ನು ತಿಳಿದುಕೊಳ್ಳದೆ, ರಾಜ್ಯ ಸರ್ಕಾರದವರ ಅಭಿಪ್ರಾಯವನ್ನು ಕೇಳದೆ, ರಾಜ್ಯ ಸರ್ಕಾರವನ್ನು ತಮ್ಮ ವಿಶ್ವಾಸದಲ್ಲಿ ತೆಗೆದುಕೊಳ್ಳದೆ ಆಗಾಗ್ಗೆ ತಮ್ಮ ಕೇಂದ್ರ ಸರ್ಕಾರದ ನೌಕರರ ತುಟ್ಟಿಭತ್ಯ ವಿಚಾರದಲ್ಲಿ ಏಕಪಕ್ಷೀಯವಾದಂತಹ ನಿರ್ಣಯವನ್ನು ತೆಗೆದುಕೊಳ್ಳುವುದು ಸರಿಯಲ್ಲ ಎಂದು ಪ್ರತಿಭಟನೆಯನ್ನು ನಾವು ಅನೇಕ ಸಾರಿ ಮಾಡಿದ್ದೇವೆ. ಇದರಿಂದ ಏನಾಗುತ್ತದೆ ಎಂದರೆ, ಯಾವ ಕೇಂದ್ರ ಸರ್ಕಾರದ ಸಿಬ್ಬಂದಿವರ್ಗ ಮತ್ತು ಕಾರ್ಖಾನೆಗಳು ಇವೆಯೋ ಅವುಗಳಿಗೆ ಹೆಚ್ಚಿನ ಸಂಬಳಸಾರಿಗೆಗಳು ಸಿಕ್ಕುತ್ತವೆ. ಆದರೆ ಅದೇ ಊರಿನಲ್ಲಿ ಅವರ ಪಕ್ಕದಲ್ಲಿ ವಾಸಮಾಡತಕ್ಕ ನಮ್ಮ ರಾಜ್ಯ ಸರ್ಕಾರದವರ ನೌಕರರಿಗೆ ಕಡಿಮೆ ತುಟ್ಟಿಭತ್ಯ ಸಿಕ್ಕುತ್ತದೆ. ಆ ರೀತಿ ಕೆಲವು ಜನಗಳಿಗೆ ಹೆಚ್ಚಿನ ತುಟ್ಟಿಭತ್ಯ ಸಿಕ್ಕುವುದರಿಂದ ಅದರ ಪರಿಣಾಮ ಮಾರುಕಟ್ಟೆಯ ಮೇಲೆ ಕೂಡ ಆಗುತ್ತದೆ. ಅದರಿಂದ ಹೆಚ್ಚಿನ ತೊಂದರೆ ನಮ್ಮ ನೌಕರರಿಗೆ ಆಗುತ್ತದೆ. ಇದನ್ನೆಲ್ಲಾ ಕೇಂದ್ರ ಸರ್ಕಾರದವರು ಗಮನಿಸಬೇಕು. ಇದು ಕೇವಲ ರಾಜ್ಯ ಸರ್ಕಾರದವರ ಜವಾಬ್ದಾರಿ ಎಂದು ಹೇಳಿ ಕೇಂದ್ರ ಸರ್ಕಾರ ತನ್ನ ಕೈ ತೊಳೆದುಕೊಳ್ಳುವುದು ಸಮಂಜಸವಲ್ಲ. ಮೈಸೂರು ಸರ್ಕಾರದವರು ಈ ವಿಚಾರವನ್ನು ಬರುವ ಏಪ್ರಿಲ್ ತಿಂಗಳು 10ನೇ ತಾರೀಕು ದೆಹಲಿಯಲ್ಲಿ ನಡೆಯುವ ಮುಖ್ಯಮಂತ್ರಿಗಳು ಮತ್ತು ರಾಜ್ಯದ ಹಣಕಾಸಿನ ಮಂತ್ರಿಗಳ ಒಂದು ಸಭೆಯಲ್ಲಿ ಇದನ್ನು ತೆಗೆದುಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ಕೇಂದ್ರ ಸರ್ಕಾರಕ್ಕೆ ತಿಳಿಸಲು ನಾವು ಅಕ್ಷೇಪೆ ಮಾಡುತ್ತೇವೆ. ಈ ರೀತಿಯಾಗಿ ಏಕಪಕ್ಷೀಯವಾಗಿ ಈ ವಿಚಾರದಲ್ಲಿ ನಿರ್ಣಯವನ್ನು ತೆಗೆದುಕೊಳ್ಳುವುದನ್ನು ಇನ್ನು ಮುಂದೆ ಬಿಡಬೇಕು ಎಂದು ಹೇಳುತ್ತೇವೆ.

12-30 P.M.

ಇದು ಕೇವಲ ಒಂದು ಸರ್ಕಾರದ ಮಾತಲ್ಲ. ಇಡೀ ದೇಶದಲ್ಲಿರತಕ್ಕ ಎಲ್ಲಾ ರಾಜ್ಯ ಸರ್ಕಾರಗಳ ಸಲಹೆಗಳನ್ನು ತೆಗೆದುಕೊಂಡು ಅವರ ಸಹಕಾರವನ್ನೂ ತೆಗೆದುಕೊಂಡು ಇನ್ನು ಮುಂದೆ ಈ ನಿರ್ಣಯ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೆಯೇ ಈ ಮೂರು ಮುಖ್ಯ ವಿಚಾರಗಳನ್ನು ಅವಲಂಬಿಸಿ ಈ ಬಜೆಟ್ಟಿನ ಉಳಿತಾಯ ಇದೆ. ನಮಗೆ ಎಳ್ಳಷ್ಟೂ ಸಂದೇಹ ಇಲ್ಲ. ಮಾನ್ಯ ಸದಸ್ಯರ ಸಹಕಾರ ಸಿಕ್ಕಿದೆ. ಯಾವಾಗಲೂ ಪ್ರಯತ್ನವನ್ನು ಕಳೆದ ಎರಡು ವರ್ಷದಿಂದ ಮಾಡುತ್ತಾ ಬಂದಿದ್ದೇವೆ. ಬಣಕಾಸಿನ ಪರಿಸ್ಥಿತಿ ಸುಧಾರಿಸಲಕ್ಕೆ ಇದೇ ಪರಿಸ್ಥಿತಿ ಮುಂದುವರೆದರೆ ಇನ್ನೂ ಹೆಚ್ಚು ಹೆಚ್ಚು ಆಶಿಸಿದ್ದು ಬಹಳ ವ್ಯಾಪಕವಾಗಿ ಆಗುತ್ತದೆ. ಮತ್ತು ತಾವೂ ಕೂಡ ಈ ರೀತಿ ಅನುಸರಿಸಿದರೆ ಹಣಕಾಸಿನ ಪರಿಸ್ಥಿತಿ ಉತ್ತಮಗೊಳ್ಳುತ್ತದೆ ಎನ್ನುವುದರಲ್ಲಿ ಎಳ್ಳಷ್ಟೂ ಸಂದೇಹ ಇಲ್ಲ. ಅದರ ಬಗ್ಗೆ ಮಾನ್ಯ ಸದಸ್ಯರಿಗೆ ಯಾವ ವಿವರಣೆ ಬೇಡ ಎಂದು ಈ ಬಿಲ್ಲಿಗೆ ಅನುಮತಿಯನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಸಿದ್ದವೀರಪ್ಪ.—ಈಗ ಹಣಕಾಸಿನ ಮಂತ್ರಿಗಳು ಹೇಳಿದರು. ಎರಡು ವರ್ಷದಿಂದಲೂ ಪ್ರಯತ್ನ ಮಾಡುತ್ತಾ ಇದ್ದೇವೆ ಎಂದು. ಹಣಕಾಸಿನ ಪರಿಸ್ಥಿತಿ ಸುಧಾರಿಸಲಕ್ಕೆ ಯಾವ ಯಾವ ಪ್ರಯತ್ನಗಳನ್ನು ಮಾಡಿದ್ದೀರಿ ಮತ್ತು ಯಾವ ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರಿ? ಷಾರ್ಟ್‌ನೋಟ್ ಒಂದನ್ನು ಜನರರ್ ಡಿಸ್ಕಷನ್ ಬರುವ ಕಾಲಕ್ಕೆ ಕೊಡಿ. ನಮಗೆ ಯಾವಾಗಲೂ ತೆರೆದ ಮನಸ್ಸು ಇರುತ್ತದೆ. ಸಹಕಾರವು ಇರುತ್ತದೆ. ಆದರೆ ಸಹಕಾರ ಕೊಡತಕ್ಕ ವಾತಾವರಣ ಇಲ್ಲ. ಅದು ಮೂಡುವತನಕ ಸಹಕಾರ ಸಿಕ್ಕುವುದು ಕಷ್ಟ. ಎರಡನೆಯದು ಬಜೆಟ್ಟಿನಲ್ಲಿ ಯಾವ ವ್ಯವಸ್ಥೆಯೂ ಇಲ್ಲ ಎನ್ನುವ ಮಾತನ್ನು ಬಹಳ ತೆರೆದ ಮನಸ್ಸಿನಿಂದ ಒಪ್ಪಿಕೊಂಡಿದ್ದೀರಿ, ಅದಕ್ಕೆ ಧನ್ಯವಾದಗಳು. ಈ ಬಜೆಟ್ಟನ್ನು ಮಾಡಬೇಕಾದರೆ ಅನೇಕ ವಿಷಯಗಳನ್ನು ಒಳಗೊಂಡು ಮಾಡಿ ಇಲ್ಲಿ ಇಟ್ಟಿದ್ದೀರಿ. ಆದರಲ್ಲಿ ನೀವು ಮುಂದೆ ವಿವರವಾಗಿ ತಿಳಿಸಬೇಕೆಂದು ಕೇಳುತ್ತೇನೆ. ಈಗ ಒಂದನ್ನು ಹೇಳಿದರು. ಈಗ ಅರ್ಧಮರ್ಧ ಕೆಲಸ ಆಗಿಬಿಟ್ಟಿದೆ, ಎಲ್ಲವನ್ನೂ ತೆಗೆದುಕೊಂಡು ಬಿಡುವುದು, ಯಾವುದೂ ಪೂರ್ಣವಾಗಿಲ್ಲ ಅಲ್ಲಲ್ಲೇ ಇದೆ ಎಂದು. ಇನ್ನು ಕೆಲವು ಕಡೆ 5 ಲಕ್ಷ, 10 ಲಕ್ಷ, 8 ಲಕ್ಷ ಹೀಗೆ ಖರ್ಚಾದ್ದು ತೆಗೆದುಕೊಂಡು ಅಲ್ಲಲ್ಲೆ ನಿಲ್ಲಿಸಿದ್ದೀರಿ. ಅದು ಯಾವ ಕಾರಣಕ್ಕೋ ಯಾವ ಪುಣ್ಯ ಪುರುಷಾರ್ಥಕ್ಕೋ ಗೊತ್ತಿಲ್ಲ. ಯೋಚನೆ ಮಾಡಬೇಕು. Infructuors expenditure ಏನು ಏನು ಮಾಡಿದ್ದಾರೆ. ಅಂಥಾದ್ದು ಒಂದು ಲಿಸ್ಟ್ ಮಾಡಿ ಕೊಟ್ಟರೆ ಬಹಳ ಸೂಕ್ತ. ಮತ್ತು ಕಾರಣವನ್ನೂ ತಿಳಿಸಿದರೆ ಬಹುಮಟ್ಟಿಗೆ ಅನುಕೂಲವಾಗುತ್ತದೆ. ಪಬ್ಲಿಕ್ ಡೆಟ್ಸ್ ಪೊಸಿಷನ್

(ಶ್ರೀ ಕೆಚ್. ಸಿದ್ಧವೀರಪ್ಪ)

ಮುಟ್ಟಿಗೆ ಬಹಳ ಸ್ಪಷ್ಟವಾಗಿ ತಿಳಿಸಬೇಕು. ಅದು ಈ ಸಭೆಗೆ ಅತ್ಯಾವಶ್ಯಕ. ಅದನ್ನು ನಾಳೆ ಬರತಕ್ಕ ಬಜೆಟ್ ಸಮಯಕ್ಕೆ ಸರಿಯಾಗಿ ಪಬ್ಲಿಕ್ ಡೆಟ್ ಯಾವರೀತಿ ಇದೆ, ಎಷ್ಟವಯಾವ ವರ್ಷ ಎಷ್ಟು ಆಗಿದೆ, ಮುಂದೆ ತೀರಿಸಲಿಕ್ಕೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ ಈ ಒಂದು ಸ್ಪಷ್ಟೀಕರಣ ಕೊಡುವುದು ಸೂಕ್ತ. ಅದರ ಜೊತೆಗೆ ಮದ್ರಾಸ್ ಕಡೆ ಕೊಡುವ ಹಾಗೆ ಬಜೆಟ್ಟಿನ ಮೇಲೆ ಒಂದು ಷಾರ್ಟ್‌ನೋಟನ್ನು ಕೊಡುವುದು ಸೂಕ್ತ. ಈ ಬಜೆಟ್ಟಿನ ಮೇಲೆ ಒಂದು ಸಿಂಹಾವಲೋಕನ ಮಾಡುವ ಕಾಲ ಬಂದಾಗ ತಿಳುವಳಿಕೆ ಕೊಡುವುದು ಸೂಕ್ತ. ಇದನ್ನು ಮಾಡಿದರೆ ಬಹುಮಟ್ಟಿಗೆ ಅನುಕೂಲವಾಗುತ್ತದೆ. ಈ ವಿಷಯದಲ್ಲಿ ಕ್ಲಾರಿಫಿಕೇಷನ್ ಕೊಟ್ಟರೆ ಬಹಳ ಉಪಕಾರವಾಗುತ್ತದೆ.

Mr. SPEAKER.—The matter of inflations is a mighty big matter. The Hon'ble Member may overflow his idea of clarification. Would you like to have it?

Sri L. SRIKANTAIAH.—I would like to have it. It is apparent from the speech of the Hon'ble Minister for Finance that the budget is closely inter-linked with overdrafts given by the Reserve Bank of India. I would like to know in view of the speech delivered by Mr. Morarji Desai how the State Government would overcome that aspect if the Central Government comes with a heavy hand that no overdrafts are permitted; secondly I would like to know whether this has no connection with the inflationary price level. From the last week, we have been receiving reports about price level. I think Mr. Morarji Desai rightly pointed out that inflationary level is mainly due to deficit financing and overdrafts drawn by State Governments. On this point I want a clarification. Then I want to know the attitude of the State Government with regard to Central D. A.; we have seen in the press report the stand taken by the Chief Minister or Kerala with regard to Central D. A. scale being extended to State Government servants. I would like to know from the State Government whether they would join hands with the Government of Kerala in presenting a unified demand that it is necessary to extend the Central D. A. to State Government employees. The States have not got so much resources, we are denying that benefit to the State Government employees and this cannot be done unless the Central Government undertakes to bear this extra cost. So, we want a policy statement from the State Government whether they will join hands with the Government of Kerala in presenting a unified demand before the Central Government?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸಿದ್ಧವೀರಪ್ಪನವರು ಕೇಳಿದ ಅನೇಕ ವಿಚಾರಗಳು ಬಜೆಟ್ಟಿನ ಮೆಮೋರ್ಯಾಂಡಂನಲ್ಲಿ ಇದೆ. ಓದಿದರೆ ಗೊತ್ತಾಗುತ್ತದೆ. ಹೆಚ್ಚಿಗೆ ಬೇಕಾದರೆ ನದನ್ಯರಿಗೆ ಕೊಡುತ್ತೇನೆ. ಮತ್ತು ಪ್ರೊಫೆಸರ್ ಶ್ರೀಕಂಠಯ್ಯನವರು ಹೇಳಿದರು ಈ ಬಗ್ಗೆ ಓವರ್ ಡ್ರಾಫ್ಟ್ ವಿಚಾರದಲ್ಲಿ 10ನೇ ತಾರೀಖು ಮೀಟಿಂಗ್ ಆಗುತ್ತದೆ. ಎಲ್ಲಾ ರಾಜ್ಯಸರ್ಕಾರಗಳ ಮುಖ್ಯಮಂತ್ರಿಗಳು, ಆರ್ಥಿಕ ಮಂತ್ರಿಗಳು ಅಲ್ಲಿಗೆ ಬರುತ್ತಾರೆ. ಆವೊತ್ತಿನಲ್ಲಿ ನಮಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಚರ್ಚೆ ಮಾಡುತ್ತೇನೆ.

Mr. SPEAKER.—The question is:

"That the Mysore Appropriation (Vote on Account) Bill, 1967 be taken into consideration."

The motion was adopted.